सत्यमेव जयते

ಭಾರತ ಸರ್ಕಾರ

ಕಾನೂನು ಮತ್ತು ನ್ಯಾಯ ಮಂತ್ರಾಲಯ

# ಮಗುವಿನ ಹಕ್ಕುಗಳ ರಕ್ಷಣಾ ಆಯೋಗಗಳ ಅಧಿನಿಯಮ, 2005

**(2006ರ ಅಧಿನಿಯಮ ಸಂಖ್ಯೆ 4)**

**[25ನೇ ಏಪ್ರಿಲ್, 2011 ರಂದು ಜಾರಿಯಲ್ಲಿದ್ದಂತೆ]**

# THE COMMISSIONS FOR PROTECTION OF CHILD RIGHTS ACT, 2005

**(Act No. 4 of 2006)**

[As on 25th April, 2011]

## ಮುನ್ನುಡಿ

25.04.2011 ರಂದು ಜಾರಿಯಲ್ಲಿದ್ದಂತೆ, ದಿ ಕಮಿಷನ್ಸ್ ಫಾರ್ ಪ್ರೊಟೆಕ್ಷನ್ ಆಫ್ ಚೈಲ್ಡ್ ರೈಟ್ಸ್ ಆ್ಯಕ್ಟ್, 2005 (2006ರ 4) – ಇದರ ಕನ್ನಡ ಅಧಿಕೃತ ಪಾಠವು ಈ ಆವೃತ್ತಿಯಲ್ಲಿರುತ್ತದೆ ಮತ್ತು ಇದನ್ನು 25.04.2011ರ ಭಾರತ ರಾಜಪತ್ರದ IXನೇ ಭಾಗದ, 1ನೇ ವಿಭಾಗದ, 45ನೇ ಸಂಪುಟದ, 1ನೇ ಸಂಖ್ಯೆಯ ವಿಶೇಷ ಸಂಚಿಕೆಯಲ್ಲಿ 73 ರಿಂದ 86ರ ವರೆಗಿನ ಪುಟಗಳಲ್ಲಿ ಪ್ರಕಟಿಸಲಾಗಿತ್ತು.

ಕನ್ನಡದ ಈ ಪಾಠವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973ರ 2ನೇ ಪ್ರಕರಣದ (ಎ) ಖಂಡದ ಮೇರೆಗೆ ಪ್ರಕಟಿಸಲಾಗಿತ್ತು. ಅಂಥ ಪ್ರಕಟಣೆಯ ತರುವಾಯ ಇದು ಈ ಅಧಿನಿಯಮದ ಅಧಿಕೃತ ಕನ್ನಡ ಪಾಠವಾಗಿರುತ್ತದೆ.

**ವಿ.ಕೆ. ಭಸೀನ್**
ಕಾರ್ಯದರ್ಶಿ
ಭಾರತ ಸರ್ಕಾರ

ನವದೆಹಲಿ
ದಿನಾಂಕ:

## PREFACE

This edition of the Commissions for Protection of Child Rights Act, 2005 (4 of 2006) as on the 25.04.2011 contains the authoritative text of that Act in Kannada which was published in the Gazette of India Extraordinary, Part IX, Section 1, No.1, Vol. 45, dated 25.04.2011 on pages 73 to 86.

This Kannada text was published under the authority of the President under clause (a) of Section 2 of the Authoritative Texts (Central Laws) Act, 1973 and on such publication it became the authoritative text of that Act in Kannada.

New Delhi
Date :

**V.K. BHASIN**
Secretary,
Government of India

**ಮಗುವಿನ ಹಕ್ಕುಗಳ ರಕ್ಷಣಾ ಆಯೋಗಗಳ ಅಧಿನಿಯಮ, 2005**
**ಪ್ರಕರಣಗಳ ಅನುಕ್ರಮಣಿಕೆ**

**ಪ್ರಕರಣಗಳು:** **ಪುಟಗಳು**

## ಅಧ್ಯಾಯ –I
## ಪ್ರಾರಂಭಿಕ


1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ 2
2. ಪರಿಭಾಷೆಗಳು 2


## ಅಧ್ಯಾಯ – II
## ರಾಷ್ಟ್ರೀಯ ಮಗುವಿನ ಹಕ್ಕುಗಳ ರಕ್ಷಣಾ ಆಯೋಗ


3. ರಾಷ್ಟ್ರೀಯ ಮಗುವಿನ ಹಕ್ಕುಗಳ ರಕ್ಷಣಾ ಆಯೋಗದ ರಚನೆ 3
4. ಅಧ್ಯಕ್ಷನ ಮತ್ತು ಸದಸ್ಯರ ನೇಮಕ 3
5. ಅಧ್ಯಕ್ಷನ ಮತ್ತು ಸದಸ್ಯರ ಪದಾವಧಿ ಮತ್ತು ಸೇವಾ ಷರತ್ತುಗಳು 4
6. ಅಧ್ಯಕ್ಷನ ಮತ್ತು ಸದಸ್ಯರ ಸಂಬಳ ಮತ್ತು ಭತ್ಯಗಳು 4
7. ಪದದಿಂದ ತೆಗೆದುಹಾಕುವುದು 4
8. ಅಧ್ಯಕ್ಷನು ಅಥವಾ ಸದಸ್ಯರು ತಮ್ಮ ಪದವನ್ನು ತೆರವು ಮಾಡುವುದು 5
9. ಖಾಲಿಸ್ಥಾನಗಳು, ಇತ್ಯಾದಿಗಳು ಆಯೋಗದ ವ್ಯವಹರಣೆಗಳನ್ನು ಅಸಿಂಧುಗೊಳಿಸದಿರುವುದು 6
10. ಕಾರ್ಯಕಲಾಪಗಳ ನಿರ್ವಹಣಾ ಕಾರ್ಯವಿಧಾನ 6
11. ಆಯೋಗದ ಸದಸ್ಯ-ಕಾರ್ಯದರ್ಶಿ, ಅಧಿಕಾರಿಗಳು ಮತ್ತು ಇತರ ನೌಕರರು 6
12. ಸಂಬಳ ಮತ್ತು ಭತ್ಯಗಳನ್ನು ಅನುದಾನಗಳಿಂದ ಸಂದಾಯ ಮಾಡುವುದು 7


## ಅಧ್ಯಾಯ –III
## ಆಯೋಗದ ಪ್ರಕಾರ್ಯಗಳು ಮತ್ತು ಅಧಿಕಾರಗಳು


13. ಆಯೋಗದ ಪ್ರಕಾರ್ಯಗಳು 7
14. ವಿಚಾರಣೆಗೆ ಸಂಬಂಧಿಸಿದ ಅಧಿಕಾರಗಳು 9
15. ವಿಚಾರಣೆ ನಂತರದ ಕ್ರಮಗಳು 10
16. ಆಯೋಗದ ವಾರ್ಷಿಕ ಮತ್ತು ವಿಶೇಷ ವರದಿಗಳು 11


## ಅಧ್ಯಾಯ – IV
## ರಾಜ್ಯ ಮಗುವಿನ ಹಕ್ಕುಗಳ ರಕ್ಷಣಾ ಆಯೋಗ


17. ರಾಜ್ಯ ಮಗುವಿನ ಹಕ್ಕುಗಳ ರಕ್ಷಣಾ ಆಯೋಗ 11
18. ಅಧ್ಯಕ್ಷನ ಮತ್ತು ಇತರ ಸದಸ್ಯರ ನೇಮಕ 12
19. ಅಧ್ಯಕ್ಷನ ಮತ್ತು ಸದಸ್ಯರ ಪದಾವಧಿ ಮತ್ತು ಸೇವಾ ಷರತ್ತುಗಳು 12

20. ಅಧ್ಯಕ್ಷನ ಮತ್ತು ಸದಸ್ಯರ ಸಂಬಳ ಮತ್ತು ಭತ್ಯಗಳು 13
21. ರಾಜ್ಯ ಆಯೋಗದ ಕಾರ್ಯದರ್ಶಿ, ಅಧಿಕಾರಿಗಳು ಮತ್ತು ಇತರ ನೌಕರರು 13
22. ಸಂಬಳ ಮತ್ತು ಭತ್ಯಗಳನ್ನು ಅನುದಾನಗಳಿಂದ ಸಂದಾಯ ಮಾಡುವುದು 13
23. ರಾಜ್ಯ ಆಯೋಗದ ವಾರ್ಷಿಕ ಮತ್ತು ವಿಶೇಷ ವರದಿಗಳು 13
24. ರಾಷ್ಟ್ರೀಯ ಮಗುವಿನ ಹಕ್ಕುಗಳ ರಕ್ಷಣಾ ಆಯೋಗಕ್ಕೆ ಸಂಬಂಧಿಸಿರುವ ಕೆಲವು ಉಪಬಂಧಗಳನ್ನು ರಾಜ್ಯ ಆಯೋಗಗಳಿಗೆ ಅನ್ವಯಿಸುವುದು 14

**ಅಧ್ಯಾಯ–V**

**ಮಕ್ಕಳ ನ್ಯಾಯಾಲಯಗಳು**

25. ಮಕ್ಕಳ ನ್ಯಾಯಾಲಯಗಳು 14
26. ವಿಶೇಷ ಸರ್ಕಾರಿ ಪ್ರಾಸಿಕ್ಯೂಟರ್ 15

**ಅಧ್ಯಾಯ – VI**

**ಹಣಕಾಸು, ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ**

27. ಕೇಂದ್ರ ಸರ್ಕಾರದಿಂದ ಅನುದಾನಗಳು 15
28. ರಾಜ್ಯ ಸರ್ಕಾರಗಳಿಂದ ಅನುದಾನಗಳು 15
29. ಆಯೋಗದ ಲೆಕ್ಕಪತ್ರಗಳು ಮತ್ತು ಲೆಕ್ಕ ಪರಿಶೋಧನೆ 16
30. ರಾಜ್ಯ ಆಯೋಗದ ಲೆಕ್ಕಪತ್ರಗಳು ಮತ್ತು ಲೆಕ್ಕ ಪರಿಶೋಧನೆ 16

**ಅಧ್ಯಾಯ –VII**

**ಸಂಕೀರ್ಣ**

31. ಸದ್ಭಾವನೆಯಿಂದ ಕೈಗೊಂಡ ಕ್ರಮದ ಸಂರಕ್ಷಣೆ 17
32. ಅಧ್ಯಕ್ಷನು, ಸದಸ್ಯರು ಮತ್ತು ಇತರ ಅಧಿಕಾರಿಗಳು ಲೋಕ ನೌಕರರಾಗಿರುವುದು 17
33. ಕೇಂದ್ರ ಸರ್ಕಾರದ ನಿರ್ದೇಶನಗಳು 18
34. ವಿವರಣೆಗಳು ಅಥವಾ ಮಾಹಿತಿ 18
35. ನಿಯಮಗಳನ್ನು ರಚಿಸಲು ಕೇಂದ್ರ ಸರ್ಕಾರದ ಅಧಿಕಾರ 18
36. ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರದ ಅಧಿಕಾರ 19
37. ತೊಂದರೆಗಳನ್ನು ನಿವಾರಿಸಲು ಅಧಿಕಾರ 20

# ಮಗುವಿನ ಹಕ್ಕುಗಳ ರಕ್ಷಣಾ ಆಯೋಗಗಳ ಅಧಿನಿಯಮ, 2005

## (2006ರ ಅಧಿನಿಯಮ ಸಂಖ್ಯೆ 4)

[ಜನವರಿ 20, 2006]

ಮಗುವಿನ ಹಕ್ಕುಗಳ ರಕ್ಷಣೆಗಾಗಿ ರಾಷ್ಟ್ರೀಯ ಆಯೋಗವನ್ನು ಮತ್ತು ರಾಜ್ಯ ಆಯೋಗಗಳನ್ನು ರಚಿಸುವುದಕ್ಕೆ ಮತ್ತು ಮಕ್ಕಳ ವಿರುದ್ಧದ ಅಥವಾ ಮಗುವಿನ ಹಕ್ಕುಗಳ ಉಲ್ಲಂಘನೆಯ ಅಪರಾಧಗಳ ತ್ವರಿತ ವಿಚಾರಣೆಗಾಗಿ ಮಕ್ಕಳ ನ್ಯಾಯಾಲಯಗಳನ್ನು ರಚಿಸುವುದಕ್ಕೆ ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಆನುಷಂಗಿಕವಾದ ವಿಷಯಗಳಿಗೆ ಉಪಬಂಧ ಕಲ್ಪಿಸುವ ಅಧಿನಿಯಮ.

1990ರಲ್ಲಿ ನಡೆದ ವಿಶ್ವ ಸಂಸ್ಥೆಯ ಸಾಮಾನ್ಯ ಶೃಂಗ ಸಭೆಯಲ್ಲಿ ಭಾರತವು ಭಾಗವಹಿಸಿ ಮಕ್ಕಳ ಉಳಿವು, ರಕ್ಷಣೆ ಮತ್ತು ಬೆಳವಣಿಗೆ ಬಗೆಗಿನ ಘೋಷಣೆಯನ್ನು ಅಂಗೀಕರಿಸಿರುವುದರಿಂದ;

ಮತ್ತು 1992ರ ಡಿಸೆಂಬರ್ 11 ರಂದು ಮಗುವಿನ ಹಕ್ಕುಗಳ ಒಡಂಬಡಿಕೆಗೆ (ಸಿಆರ್‌ಸಿ) ಭಾರತವು ಸಹ ಸಮ್ಮತಿಸಿರುವುದರಿಂದ;

ಮತ್ತು ಮಕ್ಕಳ ಹಕ್ಕುಗಳ ಒಡಂಬಡಿಕೆಯು, ಒಂದು ಅಂತರರಾಷ್ಟ್ರೀಯ ಕೌಲು ಆಗಿದ್ದು ಆ ಒಡಂಬಡಿಕೆಯಲ್ಲಿ ನಿರೂಪಿಸಿದ ಮಕ್ಕಳ ಹಕ್ಕುಗಳ ರಕ್ಷಣೆಗೆ ಎಲ್ಲಾ ಅವಶ್ಯಕ ಕ್ರಮಗಳನ್ನು ಕೈಗೊಳ್ಳಲು ಆ ಒಡಂಬಡಿಕೆಗೆ ಸಹಿ ಮಾಡಿದ ರಾಷ್ಟ್ರಗಳ ಕರ್ತವ್ಯವಾಗಿರುವುದರಿಂದ;

ಮತ್ತು ಮಕ್ಕಳ ಹಕ್ಕುಗಳ ರಕ್ಷಣೆಯನ್ನು ಸುನಿಶ್ಚಿತಗೊಳಿಸುವ ಸಲುವಾಗಿ, ಸರ್ಕಾರವು ಮಕ್ಕಳಿಗಾಗಿ ತೆಗೆದುಕೊಂಡ ಇತ್ತೀಚಿನ ಕ್ರಮಗಳಲ್ಲಿ 2003ರ ಮಕ್ಕಳ ರಾಷ್ಟ್ರೀಯ ಸನ್ನದನ್ನು ಅಳವಡಿಸಿಕೊಂಡಿರುವುದು ಒಂದು ಕ್ರಮವಾಗಿರುವುದರಿಂದ;

ಮತ್ತು 2002ರ ಮೇನಲ್ಲಿ ನಡೆದ ಮಕ್ಕಳ ಕುರಿತ ವಿಶ್ವ ಸಂಸ್ಥೆಯ ಸಾಮಾನ್ಯ ಸಭೆಯ ವಿಶೇಷ ಅಧಿವೇಶನವು ಪ್ರಸಕ್ತ ದಶಕದಲ್ಲಿ ಸದಸ್ಯ ರಾಷ್ಟ್ರಗಳು ಕೈಗೊಳ್ಳಬೇಕಾದ ಗುರಿಗಳು, ಉದ್ದೇಶಗಳು, ಕಾರ್ಯತಂತ್ರಗಳು ಮತ್ತು ಕಾರ್ಯಚಟುವಟಿಕೆಗಳನ್ನು ಒಳಗೊಂಡಿರುವ "ಚಿಣ್ಣರ ಪ್ರಪಂಚ" ಎಂಬ ಶೀರ್ಷಿಕೆಯ ಫಲಶ್ರುತಿ ದಸ್ತಾವೇಜನ್ನು ಅಂಗೀಕರಿಸಿರುವುದರಿಂದ;

ಮತ್ತು ಸರ್ಕಾರವು ಮಕ್ಕಳಿಗೆ ಸಂಬಂಧಿಸಿದಂತೆ ಅಳವಡಿಸಿಕೊಂಡ ಕಾರ್ಯನೀತಿಗಳನ್ನು ಮಗುವಿನ ಹಕ್ಕುಗಳ ಒಡಂಬಡಿಕೆ (ಸಿಆರ್‌ಸಿ) ಯಲ್ಲಿ ನಿಯಮಿಸಲಾದ ಮಾನದಂಡಗಳನ್ನು ಮತ್ತು ಎಲ್ಲಾ ಇತರ ಸಂಬಂಧಪಟ್ಟ ಅಂತರ ರಾಷ್ಟ್ರೀಯ ಲಿಖಿತಗಳನ್ನು ಜಾರಿಗೆ ತರುವುದಕ್ಕೆ ಮಕ್ಕಳಿಗೆ ಸಂಬಂಧಿಸಿರುವ ಕಾನೂನನ್ನು ಅಧಿನಿಯಮಿಸುವುದು ವಿಹಿತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಐವತ್ತಾರನೇ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:-

## ಅಧ್ಯಾಯ –I
## ಪ್ರಾರಂಭಿಕ

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ಮಗುವಿನ ಹಕ್ಕುಗಳ ರಕ್ಷಣಾ ಆಯೋಗಗಳ ಅಧಿನಿಯಮ, 2005 ಎಂದು ಕರೆಯತಕ್ಕದ್ದು.

(2) ಇದು ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಹೊರತುಪಡಿಸಿ ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

(3) ಇದು ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು.– ಈ** ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) "ಅಧ್ಯಕ್ಷ" ಎಂದರೆ ಆಯೋಗದ ಅಥವಾ ಸಂದರ್ಭಾನುಸಾರ, ರಾಜ್ಯ ಆಯೋಗದ ಅಧ್ಯಕ್ಷ ಎಂದು ಅರ್ಥ;

(ಬಿ) "ಮಗುವಿನ ಹಕ್ಕುಗಳು" ಎಂಬುದರಲ್ಲಿ 1989ರ ನವೆಂಬರ್ 20 ರಂದು ನಡೆದ ಮಕ್ಕಳ ಹಕ್ಕುಗಳ ಕುರಿತ ವಿಶ್ವಸಂಸ್ಥೆಯ ಸಮಾವೇಶದಲ್ಲಿ ಅಂಗೀಕರಿಸಿದ ಮತ್ತು 1992ರ ಡಿಸೆಂಬರ್ 11 ರಂದು ಭಾರತ ಸರ್ಕಾರವು ಅನುಸಮರ್ಥಿಸಿದ ಮಗುವಿನ ಹಕ್ಕುಗಳು ಒಳಗೊಳ್ಳುತ್ತವೆ;

(ಸಿ) "ಆಯೋಗ" ಎಂದರೆ 3ನೇ ಪ್ರಕರಣದ ಮೇರೆಗೆ ಸ್ಥಾಪಿಸಿದ ರಾಷ್ಟ್ರೀಯ ಮಗುವಿನ ಹಕ್ಕುಗಳ ರಕ್ಷಣಾ ಆಯೋಗ ಎಂದು ಅರ್ಥ;

(ಡಿ) "ಸದಸ್ಯ" ಎಂದರೆ ಆಯೋಗದ ಅಥವಾ ಸಂದರ್ಭಾನುಸಾರ ರಾಜ್ಯ ಆಯೋಗದ ಸದಸ್ಯ ಎಂದು ಅರ್ಥ ಮತ್ತು ಅದು ಅಧ್ಯಕ್ಷನನ್ನು ಒಳಗೊಳ್ಳುತ್ತದೆ;

(ಇ) "ಅಧಿಸೂಚನೆ" ಎಂದರೆ ರಾಜಪತ್ರದಲ್ಲಿ ಪ್ರಕಟಿಸಿದ ಅಧಿಸೂಚನೆ ಎಂದು ಅರ್ಥ;

(ಎಫ್) "ನಿಯಮಿಸಿದ" ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು ಎಂದು ಅರ್ಥ;

(ಜಿ) "ರಾಜ್ಯ ಆಯೋಗ" ಎಂದರೆ 17ನೇ ಪ್ರಕರಣದ ಮೇರೆಗೆ ಸ್ಥಾಪಿಸಿದ ರಾಜ್ಯ ಮಗುವಿನ ಹಕ್ಕುಗಳ ರಕ್ಷಣಾ ಆಯೋಗ ಎಂದು ಅರ್ಥ.

## ಅಧ್ಯಾಯ – II
## ರಾಷ್ಟ್ರೀಯ ಮಗುವಿನ ಹಕ್ಕುಗಳ ರಕ್ಷಣಾ ಆಯೋಗ

**3. ರಾಷ್ಟ್ರೀಯ ಮಗುವಿನ ಹಕ್ಕುಗಳ ರಕ್ಷಣಾ ಆಯೋಗದ ರಚನೆ.–** (1) ಕೇಂದ್ರ ಸರ್ಕಾರವು, ಅಧಿಸೂಚನೆಯ ಮೂಲಕ ಈ ಅಧಿನಿಯಮದ ಮೇರೆಗೆ, ಆಯೋಗಕ್ಕೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಲು ಮತ್ತು ಅದಕ್ಕೆ ವಹಿಸಲಾದ ಪ್ರಕಾರ್ಯಗಳನ್ನು ನಿರ್ವಹಿಸಲು ರಾಷ್ಟ್ರೀಯ ಮಗುವಿನ ಹಕ್ಕುಗಳ ರಕ್ಷಣಾ ಆಯೋಗ ಎಂಬ ಹೆಸರಿನಿಂದ ಕರೆಯಲಾಗುವ ನಿಕಾಯವೊಂದನ್ನು ಸ್ಥಾಪಿಸತಕ್ಕದ್ದು.

(2) ಆಯೋಗವು ಈ ಕೆಳಕಂಡ ಸದಸ್ಯರನ್ನೊಳಗೊಂಡಿರತಕ್ಕದ್ದು, ಎಂದರೆ:–

(ಎ) ಖ್ಯಾತ ವ್ಯಕ್ತಿಯಾಗಿದ್ದು ಮತ್ತು ಮಕ್ಕಳ ಕಲ್ಯಾಣವನ್ನು ಸಂವರ್ಧನೆಗೊಳಿಸುವ ಸಂಬಂಧದಲ್ಲಿ ಅಸಾಧಾರಣ ಕಾರ್ಯಮಾಡಿರುವ ವ್ಯಕ್ತಿಯಾಗಿರುವ ಅಧ್ಯಕ್ಷ; ಮತ್ತು

(ಬಿ) ಈ ಕೆಳಕಂಡ ಕ್ಷೇತ್ರಗಳಲ್ಲಿ ಎಂದರೆ:–

(i) ಶಿಕ್ಷಣ;

(ii) ಮಗುವಿನ ಆರೋಗ್ಯ, ಪಾಲನೆ, ಕಲ್ಯಾಣ ಅಥವಾ ಮಗುವಿನ ಬೆಳವಣಿಗೆ;

(iii) ಬಾಲಕ ನ್ಯಾಯ ಅಥವಾ ನಿರ್ಲಕ್ಷಿತ ಅಥವಾ ಕಡೆಗಣಿಸಿದ ಮಕ್ಕಳ ಅಥವಾ ಅಸಮರ್ಥತೆಯುಳ್ಳ ಮಕ್ಕಳ ಪಾಲನೆ;

(iv) ಬಾಲ ಕಾರ್ಮಿಕ ಪದ್ಧತಿಯನ್ನು ತೊಡೆದು ಹಾಕುವುದು ಅಥವಾ ಸಂಕಷ್ಟದಲ್ಲಿರುವ ಮಕ್ಕಳ ರಕ್ಷಣೆ;

(v) ಮಗುವಿನ ಮನಶಾಸ್ತ್ರ ಅಥವಾ ಸಮಾಜಶಾಸ್ತ್ರ; ಮತ್ತು

(vi) ಮಕ್ಕಳಿಗೆ ಸಂಬಂಧಿಸಿರುವ ಕಾನೂನುಗಳು

– ಇವುಗಳಲ್ಲಿ ಖ್ಯಾತರಾದ, ಸಮರ್ಥರಾದ, ನಿಷ್ಠರಾದ, ಸ್ಥಾನಮಾನವುಳ್ಳ ಹಾಗೂ ಅನುಭವ ಹೊಂದಿರುವ ವ್ಯಕ್ತಿಗಳೊಳಗಿಂದ ಕೇಂದ್ರ ಸರ್ಕಾರವು ನೇಮಕ ಮಾಡುವ ಆರು ಸದಸ್ಯರು, ಇವರಲ್ಲಿ ಕನಿಷ್ಠ ಪಕ್ಷ ಇಬ್ಬರು ಮಹಿಳೆಯರು ಇರತಕ್ಕದ್ದು.

(3) ಆಯೋಗದ ಕಚೇರಿಯು ದೆಹಲಿಯಲ್ಲಿರತಕ್ಕದ್ದು.

**4. ಅಧ್ಯಕ್ಷನ ಮತ್ತು ಸದಸ್ಯರ ನೇಮಕ.–** ಕೇಂದ್ರ ಸರ್ಕಾರವು ಅಧಿಸೂಚನೆಯ ಮೂಲಕ ಅಧ್ಯಕ್ಷನನ್ನು ಮತ್ತು ಇತರ ಸದಸ್ಯರನ್ನು ನೇಮಕ ಮಾಡತಕ್ಕದ್ದು:

ಪರಂತು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮಂತ್ರಾಲಯದ ಅಥವಾ ಇಲಾಖೆಯ ಪ್ರಭಾರದಲ್ಲಿರುವ ಸಚಿವರ ಅಧ್ಯಕ್ಷತೆಯಲ್ಲಿ ಕೇಂದ್ರ ಸರ್ಕಾರವು ರಚಿಸಿದ ಮೂವರು ಸದಸ್ಯರ ಆಯ್ಕೆ ಸಮಿತಿಯ ಶಿಫಾರಸ್ಸಿನ ಮೇಲೆ ಅಧ್ಯಕ್ಷನನ್ನು ನೇಮಕ ಮಾಡತಕ್ಕದ್ದು.

**5. ಅಧ್ಯಕ್ಷನ ಮತ್ತು ಸದಸ್ಯರ ಪದಾವಧಿ ಮತ್ತು ಸೇವಾ ಷರತ್ತುಗಳು.–** (1) ಅಧ್ಯಕ್ಷ ಮತ್ತು ಪ್ರತಿಯೊಬ್ಬ ಸದಸ್ಯನು, ಆತನು ಪದಧಾರಣ ಮಾಡಿದ ದಿನಾಂಕದಿಂದ ಮೂರು ವರ್ಷಗಳ ಅವಧಿಯವರೆಗೆ ಅಂಥ ಪದವನ್ನು ಧಾರಣ ಮಾಡಿರತಕ್ಕದ್ದು:

ಪರಂತು, ಅಧ್ಯಕ್ಷ ಅಥವಾ ಸದಸ್ಯನು ಎರಡು ಅವಧಿಗಿಂತ ಹೆಚ್ಚು ಅವಧಿಗಾಗಿ ಪದಧಾರಣ ಮಾಡತಕ್ಕದ್ದಲ್ಲ:

ಮತ್ತೂ ಪರಂತು, ಅಧ್ಯಕ್ಷನು ಅಥವಾ ಯಾರೇ ಇತರ ಸದಸ್ಯನು,–

(ಎ) ಅಧ್ಯಕ್ಷನ ಸಂದರ್ಭದಲ್ಲಿ ಅರವತ್ತೈದು ವರ್ಷಗಳ ವಯಸ್ಸು; ಮತ್ತು

(ಬಿ) ಸದಸ್ಯರ ಸಂದರ್ಭದಲ್ಲಿ ಅರವತ್ತು ವರ್ಷಗಳ ವಯಸ್ಸು

– ತುಂಬಿದ ತರುವಾಯ ಅಂಥ ಪದಧಾರಣ ಮಾಡತಕ್ಕದ್ದಲ್ಲ.

(2) ಅಧ್ಯಕ್ಷನು ಅಥವಾ ಸದಸ್ಯನು ಯಾವುದೇ ಕಾಲದಲ್ಲಿ ಕೇಂದ್ರ ಸರ್ಕಾರಕ್ಕೆ ಲಿಖಿತದಲ್ಲಿ ತಾನು ಸಹಿ ಮಾಡಿದ ಪತ್ರವನ್ನು ಕಳುಹಿಸುವ ಮೂಲಕ ತನ್ನ ಪದಕ್ಕೆ ರಾಜೀನಾಮೆ ನೀಡಬಹುದು.

**6. ಅಧ್ಯಕ್ಷನ ಮತ್ತು ಸದಸ್ಯರ ಸಂಬಳ ಮತ್ತು ಭತ್ಯಗಳು.–** ಅಧ್ಯಕ್ಷನಿಗೆ ಮತ್ತು ಸದಸ್ಯರಿಗೆ ಸಂದಾಯ ಮಾಡಬಹುದಾದ ಸಂಬಳ ಮತ್ತು ಭತ್ಯಗಳು ಮತ್ತು ಇತರೆ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು ಕೇಂದ್ರ ಸರ್ಕಾರವು ನಿಯಮಿಸಬಹುದಾದಂತೆ ಇರತಕ್ಕದ್ದು:

ಪರಂತು, ಅಧ್ಯಕ್ಷನ ಅಥವಾ ಸಂದರ್ಭಾನುಸಾರ, ಸದಸ್ಯನ ಸಂಬಳ ಮತ್ತು ಭತ್ಯೆಗಳನ್ನಾಗಲಿ ಅಥವಾ ಇತರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳನ್ನಾಗಲಿ ಅವನ ನೇಮಕದ ತರುವಾಯ ಅವನಿಗೆ ಅನಾನುಕೂಲವಾಗುವ ರೀತಿಯಲ್ಲಿ ವ್ಯತ್ಯಾಸಗೊಳಿಸತಕ್ಕದ್ದಲ್ಲ.

**7. ಪದದಿಂದ ತೆಗೆದುಹಾಕುವುದು.–** (1) (2)ನೇ ಉಪಪ್ರಕರಣದ ಉಪಬಂಧಗಳಿಗೆ ಒಳಪಟ್ಟು, ಕೇಂದ್ರ ಸರ್ಕಾರವು, ರುಜುವಾತಾದ ದುರ್ವರ್ತನೆ ಅಥವಾ ಅಸಮರ್ಥತೆಯ ಕಾರಣದ ಮೇಲೆ ಅಧ್ಯಕ್ಷನನ್ನು ಆದೇಶದ ಮೂಲಕ ಅವನ ಪದದಿಂದ ತೆಗೆದುಹಾಕಬಹುದು.

(2) (1)ನೇ ಉಪಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಕೇಂದ್ರ ಸರ್ಕಾರವು, ಆದೇಶದ ಮೂಲಕ ಅಧ್ಯಕ್ಷ ಅಥವಾ ಸಂದರ್ಭಾನುಸಾರ ಅಂಥ ಇತರೆ ಸದಸ್ಯನು,–

(ಎ) ದಿವಾಳಿಯಾಗಿದ್ದಾನೆಂದು ನ್ಯಾಯ ನಿರ್ಣೀತನಾದರೆ; ಅಥವಾ

(ಬಿ) ಅವನ ಪದಾವಧಿಯಲ್ಲಿ ಅವನ ಪದದ ಕರ್ತವ್ಯಗಳನ್ನು ಹೊರತುಪಡಿಸಿ ಯಾವುದೇ ಸಂಬಳವುಳ್ಳ ಉದ್ಯೋಗದಲ್ಲಿ ತೊಡಗಿದ್ದರೆ; ಅಥವಾ

(ಸಿ) ಕಾರ್ಯನಿರ್ವಹಿಸಲು ನಿರಾಕರಿಸಿದರೆ ಅಥವಾ ಕಾರ್ಯನಿರ್ವಹಿಸಲು ಅಸಮರ್ಥನಾದರೆ; ಅಥವಾ

(ಡಿ) ಅಸ್ವಸ್ಥಚಿತ್ತನಾಗಿದ್ದರೆ ಮತ್ತು ಸಕ್ಷಮ ನ್ಯಾಯಾಲಯದಿಂದ ಹಾಗೆಂದು ಘೋಷಿಸಲಾಗಿದ್ದರೆ; ಅಥವಾ

(ಇ) ಅವನು ತನ್ನ ಪದದಲ್ಲಿ ಮುಂದುವರಿಯುವುದು ಸಾರ್ವಜನಿಕ ಹಿತಾಸಕ್ತಿಗೆ ಬಾಧಕವಾಗುವಂತೆ ತನ್ನ ಪದವನ್ನು ದುರುಪಯೋಗಪಡಿಸಿಕೊಂಡಿದ್ದರೆ; ಅಥವಾ

(ಎಫ್) ಕೇಂದ್ರ ಸರ್ಕಾರದ ಅಭಿಪ್ರಾಯದಲ್ಲಿ ನೈತಿಕ ಅಧಃಪತನವನ್ನು ಒಳಗೊಳ್ಳುವ ಅಪರಾಧಕ್ಕಾಗಿ ಅಪರಾಧಿಯೆಂದು ನ್ಯಾಯ ನಿರ್ಣೀತನಾಗಿದ್ದರೆ ಮತ್ತು ಕಾರಾವಾಸ ಶಿಕ್ಷೆಗೆ ಗುರಿಯಾಗಿದ್ದರೆ; ಅಥವಾ

(ಜಿ) ಆಯೋಗದಿಂದ ಗೈರು ಹಾಜರಿಗೆ ಅನುಮತಿ ಪಡೆಯದೆ ನಿರಂತರವಾಗಿ ಆಯೋಗದ ಮೂರು ಸಭೆಗಳಿಗೆ ಗೈರು ಹಾಜರಾಗಿದ್ದರೆ

– ಅಂಥ ಅಧ್ಯಕ್ಷನನ್ನು ಅಥವಾ ಇತರ ಯಾರೇ ಸದಸ್ಯನನ್ನು ಪದದಿಂದ ತೆಗೆದುಹಾಕಬಹುದು.

(3) ಈ ಪ್ರಕರಣದ ಮೇರೆಗೆ ಯಾರೇ ವ್ಯಕ್ತಿಯನ್ನು ಅವನಿಗೆ ಆ ವಿಷಯದ ಬಗ್ಗೆ ಅಹವಾಲನ್ನು ಹೇಳಿಕೊಳ್ಳಲು ಅವಕಾಶ ನೀಡುವವರೆಗೆ ತೆಗೆದುಹಾಕತಕ್ಕದ್ದಲ್ಲ.

**8. ಅಧ್ಯಕ್ಷನು ಅಥವಾ ಸದಸ್ಯರು ತಮ್ಮ ಪದವನ್ನು ತೆರವು ಮಾಡುವುದು.–** (1) ಅಧ್ಯಕ್ಷನು ಅಥವಾ ಸಂದರ್ಭಾನುಸಾರ, ಸದಸ್ಯನು,–

(ಎ) 7ನೇ ಪ್ರಕರಣದಲ್ಲಿ ನಮೂದಿಸಿದ ಯಾವುವೇ ಅನರ್ಹತೆಗಳಿಗೆ ಒಳಪಟ್ಟರೆ; ಅಥವಾ

(ಬಿ) 5ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ರಾಜೀನಾಮೆ ನೀಡಿದ್ದರೆ

– ತದನಂತರ ಅವನ ಸ್ಥಾನವು ಖಾಲಿಯಾಗತಕ್ಕದ್ದು.

(2) ಅಧ್ಯಕ್ಷನ ಅಥವಾ ಸದಸ್ಯನ ಪದವು, ಅವನ ಮರಣ, ರಾಜಿನಾಮೆ ಅಥವಾ ಬೇರೆ ಕಾರಣದಿಂದ ಆಕಸ್ಮಿಕವಾಗಿ ಖಾಲಿಯಾದರೆ, ಅಂಥ ಖಾಲಿ ಸ್ಥಾನವನ್ನು ತೊಂಬತ್ತು ದಿವಸಗಳ ಅವಧಿಯೊಳಗೆ 4ನೇ ಪ್ರಕರಣದ ಉಪಬಂಧಗಳಿಗನುಸಾರವಾಗಿ ಹೊಸದಾಗಿ ನೇಮಕ ಮಾಡುವ ಮೂಲಕ ಭರ್ತಿ ಮಾಡತಕ್ಕದ್ದು ಮತ್ತು ಹಾಗೆ ನೇಮಕಗೊಂಡ ವ್ಯಕ್ತಿಯು, ಅವನು ಯಾವ ಅಧ್ಯಕ್ಷನ ಅಥವಾ ಸಂದರ್ಭಾನುಸಾರ, ಸದಸ್ಯನ ಸ್ಥಾನದಲ್ಲಿ ಹಾಗೆ ನೇಮಕಗೊಂಡಿರುವನೋ, ಆ ಅಧ್ಯಕ್ಷ ಅಥವಾ ಸದಸ್ಯನು ಪದಧಾರಣ ಮಾಡಬಹುದಾಗಿದ್ದ ಉಳಿದ ಅವಧಿಯವರೆಗೆ ಅಂಥ ಪದವನ್ನು ಪದಧಾರಣ ಮಾಡತಕ್ಕದ್ದು.

**9. ಖಾಲಿಸ್ಥಾನಗಳು, ಇತ್ಯಾದಿಗಳು ಆಯೋಗದ ವ್ಯವಹರಣೆಗಳನ್ನು ಅಸಿಂಧುಗೊಳಿಸದಿರುವುದು.–** ಆಯೋಗದ ಯಾವುದೇ ಕಾರ್ಯವು ಅಥವಾ ವ್ಯವಹರಣೆಯು,–

(ಎ) ಆಯೋಗದಲ್ಲಿ ಯಾವುದೇ ಸ್ಥಾನವು ಖಾಲಿ ಇರುವ ಅಥವಾ ಅದರ ರಚನೆಯಲ್ಲಿನ ಯಾವುದೇ ನ್ಯೂನತೆಯ; ಅಥವಾ

(ಬಿ) ಅಧ್ಯಕ್ಷನಾಗಿ ಅಥವಾ ಸದಸ್ಯನಾಗಿ ನೇಮಕಗೊಂಡಿರುವ ವ್ಯಕ್ತಿಯ ನೇಮಕದಲ್ಲಿ ಯಾವುದೇ ನ್ಯೂನತೆಯ; ಅಥವಾ

(ಸಿ) ಪ್ರಕರಣದ ಗುಣಾವಗುಣಗಳಿಗೆ ಬಾಧಕವಾಗದ ಆಯೋಗದ ಪ್ರಕ್ರಿಯೆಯಲ್ಲಿನ ಯಾವುದೇ ಅಕ್ರಮತೆಯ

– ಕಾರಣ ಮಾತ್ರದಿಂದಲೇ ಅಸಿಂಧುವಾಗತಕ್ಕದ್ದಲ್ಲ.

**10. ಕಾರ್ಯಕಲಾಪಗಳ ನಿರ್ವಹಣಾ ಕಾರ್ಯವಿಧಾನ.–** (1) ಆಯೋಗವು, ಅಧ್ಯಕ್ಷನು ಸೂಕ್ತವೆಂದು ಭಾವಿಸುವಂಥ ಕಾಲದಲ್ಲಿ ತನ್ನ ಕಚೇರಿಯಲ್ಲಿ ನಿಯತವಾಗಿ ಸಭೆ ಸೇರತಕ್ಕದ್ದು. ಆದರೆ ತನ್ನ ಹಿಂದಿನ ಮತ್ತು ಮುಂದಿನ ಸಭೆಯ ನಡುವೆ ಮೂರು ತಿಂಗಳ ಅಂತರವಿರತಕ್ಕದ್ದಲ್ಲ.

(2) ಸಭೆಯಲ್ಲಿನ ಎಲ್ಲಾ ತೀರ್ಮಾನಗಳನ್ನು ಬಹುಮತದ ಮೂಲಕ ತೆಗೆದುಕೊಳ್ಳತಕ್ಕದ್ದು:

ಪರಂತು, ಮತಗಳು ಸಮನಾಗಿ ಬಂದ ಸಂದರ್ಭದಲ್ಲಿ, ಅಧ್ಯಕ್ಷನು ಅಥವಾ ಅವನ ಗೈರು ಹಾಜರಿಯಲ್ಲಿ ಅಧ್ಯಕ್ಷತೆ ವಹಿಸಿದ ವ್ಯಕ್ತಿಯು ಎರಡನೆಯ ಅಥವಾ ನಿರ್ಣಾಯಕ ಮತವನ್ನು ಹೊಂದಿರತಕ್ಕದ್ದು ಮತ್ತು ಚಲಾಯಿಸತಕ್ಕದ್ದು.

(3) ಯಾವುದೇ ಕಾರಣಕ್ಕಾಗಿ ಆಯೋಗದ ಸಭೆಗೆ ಹಾಜರಾಗಲು ಅಧ್ಯಕ್ಷನು ಅಸಮರ್ಥನಾದರೆ, ಸಭೆಯಲ್ಲಿ ಹಾಜರಿರುವ ಸದಸ್ಯರೊಳಗಿಂದ ಅವರು ಆಯ್ಕೆ ಮಾಡಿದ ಯಾರೇ ಸದಸ್ಯನು ಸಭೆಯ ಅಧ್ಯಕ್ಷತೆ ವಹಿಸತಕ್ಕದ್ದು.

(4) ಆಯೋಗವು, ಸಭೆಯಲ್ಲಿನ ಕೋರಂ ಸೇರಿದಂತೆ ಸಭೆಯಲ್ಲಿನ ತನ್ನ ಕಾರ್ಯಕಲಾಪ ನಿರ್ವಹಣೆಯಲ್ಲಿ ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ಪ್ರಕ್ರಿಯಾ ನಿಯಮಗಳನ್ನು ಪಾಲಿಸತಕ್ಕದ್ದು.

(5) ಆಯೋಗದ ಎಲ್ಲಾ ಆದೇಶಗಳನ್ನು ಮತ್ತು ತೀರ್ಮಾನಗಳನ್ನು ಸದಸ್ಯ-ಕಾರ್ಯದರ್ಶಿ ಅಥವಾ ಈ ಬಗ್ಗೆ ಸದಸ್ಯ-ಕಾರ್ಯದರ್ಶಿಯಿಂದ ಕ್ರಮಬದ್ಧವಾಗಿ ಅಧಿಕೃತಗೊಂಡ ಆಯೋಗದ ಯಾರೇ ಇತರ ಅಧಿಕಾರಿಯು ಅಧಿಪ್ರಮಾಣೀಕರಿಸತಕ್ಕದ್ದು.

**11. ಆಯೋಗದ ಸದಸ್ಯ-ಕಾರ್ಯದರ್ಶಿ, ಅಧಿಕಾರಿಗಳು ಮತ್ತು ಇತರ ನೌಕರರು.–** (1) ಕೇಂದ್ರ ಸರ್ಕಾರವು, ಅಧಿಸೂಚನೆಯ ಮೂಲಕ ಭಾರತ ಸರ್ಕಾರದ ಜಂಟಿ ಕಾರ್ಯದರ್ಶಿ ಅಥವಾ ಹೆಚ್ಚುವರಿ ಕಾರ್ಯದರ್ಶಿ ದರ್ಜೆಗಿಂತ ಕಡಿಮೆಯಿರದ ಅಧಿಕಾರಿಯನ್ನು ಆಯೋಗದ ಸದಸ್ಯ-

ಕಾರ್ಯದರ್ಶಿಯನ್ನಾಗಿ ನೇಮಕ ಮಾಡತಕ್ಕದ್ದು ಮತ್ತು ಆಯೋಗದ ಪ್ರಕಾರ್ಯಗಳ ದಕ್ಷ ನಿರ್ವಹಣೆಗಾಗಿ ಅವಶ್ಯಕವಾಗಬಹುದಾದಂಥ ಇತರ ಅಧಿಕಾರಿಗಳನ್ನು ಮತ್ತು ನೌಕರರನ್ನು ಅದಕ್ಕೆ ಒದಗಿಸತಕ್ಕದ್ದು.

(2) ಆಯೋಗದ ವ್ಯವಹಾರಗಳ ಯುಕ್ತ ನಿರ್ವಹಣೆಗಾಗಿ ಮತ್ತು ಅದರ ದಿನನಿತ್ಯದ ವ್ಯವಸ್ಥಾಪನೆಗಾಗಿ ಸದಸ್ಯ-ಕಾರ್ಯದರ್ಶಿಯು ಜವಾಬ್ದಾರನಾಗಿರತಕ್ಕದ್ದು ಮತ್ತು ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಹಾಗೂ ನಿರ್ವಹಿಸತಕ್ಕದ್ದು ಮತ್ತು ಅಂಥ ಇತರ ಕರ್ತವ್ಯಗಳನ್ನು ನೇರವೇರಿಸತಕ್ಕದ್ದು.

(3) ಆಯೋಗದ ಉದ್ದೇಶಕ್ಕಾಗಿ ನೇಮಕಗೊಂಡ ಸದಸ್ಯ-ಕಾರ್ಯದರ್ಶಿಗೆ, ಇತರ ಅಧಿಕಾರಿಗಳಿಗೆ ಮತ್ತು ನೌಕರರಿಗೆ ಸಂದಾಯ ಮಾಡಬೇಕಾದ ಸಂಬಳ ಮತ್ತು ಭತ್ಯೆಗಳು ಮತ್ತು ಅವರ ಇತರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು ಕೇಂದ್ರ ಸರ್ಕಾರವು ನಿಯಮಿಸಬಹುದಾದಂತೆ ಇರತಕ್ಕದ್ದು.

**12. ಸಂಬಳ ಮತ್ತು ಭತ್ಯಗಳನ್ನು ಅನುದಾನಗಳಿಂದ ಸಂದಾಯ ಮಾಡುವುದು.–** 11ನೇ ಪ್ರಕರಣದಲ್ಲಿ ಉಲ್ಲೇಖಿಸಿದ ಸದಸ್ಯ-ಕಾರ್ಯದರ್ಶಿಗೆ, ಇತರ ಅಧಿಕಾರಿಗಳಿಗೆ ಮತ್ತು ನೌಕರರಿಗೆ ಸಂದಾಯ ಮಾಡಲಾಗುವ ಸಂಬಳಗಳು, ಭತ್ಯಗಳು ಮತ್ತು ನಿವೃತ್ತಿ ವೇತನಗಳು ಸೇರಿದಂತೆ, ಅಧ್ಯಕ್ಷನಿಗೆ ಮತ್ತು ಸದಸ್ಯರಿಗೆ ಸಂದಾಯ ಮಾಡಲಾಗುವ ಸಂಬಳಗಳನ್ನು ಮತ್ತು ಭತ್ಯಗಳನ್ನು ಮತ್ತು ಆಡಳಿತಾತ್ಮಕ ವೆಚ್ಚಗಳನ್ನು 27ನೇ ಪ್ರಕರಣದ (1)ನೇ ಉಪ ಪ್ರಕರಣದಲ್ಲಿ ಉಲ್ಲೇಖಿಸಿದ ಅನುದಾನಗಳಿಂದ ಸಂದಾಯ ಮಾಡತಕ್ಕದ್ದು.

## ಅಧ್ಯಾಯ – III
## ಆಯೋಗದ ಪ್ರಕಾರ್ಯಗಳು ಮತ್ತು ಅಧಿಕಾರಗಳು

**13. ಆಯೋಗದ ಪ್ರಕಾರ್ಯಗಳು.–** (1) ಆಯೋಗವು ಈ ಮುಂದಿನ ಎಲ್ಲಾ ಅಥವಾ ಯಾವುದೇ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು, ಎಂದರೆ:–

(ಎ) ಮಗುವಿನ ಹಕ್ಕುಗಳ ರಕ್ಷಣೆಗಾಗಿ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೂಲಕ ಅಥವಾ ಕಾನೂನಿನ ಮೇರೆಗೆ ಒದಗಿಸಲಾದ ರಕ್ಷಣೆಗಳ ಪರಿಶೀಲನೆ ಮತ್ತು ಪುನರವಲೋಕನ ಹಾಗೂ ಅವುಗಳ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಕ್ರಮಗಳನ್ನು ಶಿಫಾರಸು ಮಾಡುವುದು;

(ಬಿ) ಆಯೋಗವು ವಾರ್ಷಿಕವಾಗಿ ಮತ್ತು ಅದು ಸೂಕ್ತವೆಂದು ಭಾವಿಸುವಂಥ ಇತರ ಮಧ್ಯಂತರಗಳಲ್ಲಿ ಈ ರಕ್ಷಣಾ ಕ್ರಮಗಳ ಕಾರ್ಯನಿರ್ವಹಣೆಯ ಬಗ್ಗೆ ಕೇಂದ್ರ ಸರ್ಕಾರಕ್ಕೆ ವರದಿ ಸಲ್ಲಿಸುವುದು;

(ಸಿ) ಮಗುವಿನ ಹಕ್ಕುಗಳ ಉಲ್ಲಂಘನೆಯ ವಿಚಾರಣೆ ಮಾಡುವುದು ಮತ್ತು ಅಂಥ ಪ್ರಕರಣಗಳಲ್ಲಿ ಕಾನೂನು ವ್ಯವಹರಣೆಗಳನ್ನು ಹೂಡುವುದಕ್ಕೆ ಶಿಫಾರಸ್ಸು ಮಾಡುವುದು;

(ಡಿ) ಭಯೋತ್ಪಾದನೆ, ಮತೀಯ ಹಿಂಸಾಚಾರ, ದೊಂಬಿ, ಪ್ರಾಕೃತಿಕ ವಿಕೋಪ, ಗೃಹಸಂಬಂಧೀ ಹಿಂಸೆ, ಹೆಚ್‌ಐವಿ/ಏಡ್ಸ್, ಕಳ್ಳಸಾಗಣೆ, ಕೆಟ್ಟ ರೀತಿಯಲ್ಲಿ ನಡೆಸಿಕೊಳ್ಳುವುದು, ಚಿತ್ರಹಿಂಸೆ ಮತ್ತು ಶೋಷಣೆ, ಕಾಮ ಪ್ರಚೋದಕತೆ ಮತ್ತು ವೇಶ್ಯಾವೃತ್ತಿ – ಇವುಗಳಿಂದ ಬಾಧಿತರಾದ ಮಕ್ಕಳು, ತಮ್ಮ ಹಕ್ಕುಗಳನ್ನು ಅನುಭವಿಸುವುದರಿಂದ ವಂಚಿತರಾಗುತ್ತಿರುವ ಎಲ್ಲಾ ಸಂಗತಿಗಳನ್ನು ಪರೀಕ್ಷಿಸುವುದು ಮತ್ತು ಸೂಕ್ತ ಪರಿಹಾರಕ್ರಮಗಳಿಗೆ ಶಿಫಾರಸು ಮಾಡುವುದು;

(ಇ) ಸಂಕಷ್ಟದಲ್ಲಿರುವ ಮಕ್ಕಳು, ಕಡೆಗಣಿಸಲಾದ ಮತ್ತು ಅನುಕೂಲ ವಂಚಿತ ಮಕ್ಕಳು, ಕಾನೂನಿನ ಜೊತೆಯಲ್ಲಿ ಸಂಘರ್ಷವಿರುವ ಮಕ್ಕಳು, ಬಾಲಾಪರಾಧಿಗಳು, ಕುಟುಂಬ ರಹಿತ ಮಕ್ಕಳು ಮತ್ತು ಕೈದಿಗಳ ಮಕ್ಕಳೂ ಸೇರಿದಂತೆ ವಿಶೇಷ ಪಾಲನೆ ಹಾಗೂ ರಕ್ಷಣೆಯ ಅಗತ್ಯವಿರುವ ಮಕ್ಕಳಿಗೆ ಸಂಬಂಧಿಸಿರುವ ವಿಷಯಗಳ ಬಗ್ಗೆ ಗಮನ ಹರಿಸಿ ಸೂಕ್ತ ಪರಿಹಾರ ಕ್ರಮಗಳಿಗೆ ಶಿಫಾರಸ್ಸು ಮಾಡುವುದು;

(ಎಫ್) ಮಗುವಿನ ಹಕ್ಕುಗಳ ಬಗ್ಗೆ ಕೌಲುಗಳನ್ನು ಮತ್ತು ಇತರ ಅಂತರರಾಷ್ಟ್ರೀಯ ಲಿಖಿತಗಳನ್ನು ಅಧ್ಯಯನ ಮಾಡುವುದು ಮತ್ತು ಮಕ್ಕಳ ಹಕ್ಕುಗಳ ಬಗ್ಗೆ ಅಸ್ತಿತ್ವದಲ್ಲಿರುವ ಕಾರ್ಯನೀತಿಗಳನ್ನು, ಕಾರ್ಯಕ್ರಮಗಳನ್ನು ಮತ್ತು ಇತರ ಚಟುವಟಿಕೆಗಳನ್ನು ನಿಯತಕಾಲಿಕವಾಗಿ ಪುನರವಲೋಕನ ಮಾಡುವುದು ಮತ್ತು ಮಕ್ಕಳ ಅತ್ಯುತ್ತಮ ಹಿತದೃಷ್ಟಿಯಿಂದ ಅವುಗಳ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಶಿಫಾರಸ್ಸುಗಳನ್ನು ಮಾಡುವುದು;

(ಜಿ) ಮಗುವಿನ ಹಕ್ಕುಗಳ ಕ್ಷೇತ್ರದಲ್ಲಿ ಸಂಶೋಧನೆಯನ್ನು ಕೈಗೊಳ್ಳುವುದು ಮತ್ತು ಅದನ್ನು ಸಂವರ್ಧನೆಗೊಳಿಸುವುದು;

(ಹೆಚ್) ಸಮಾಜದ ವಿವಿಧ ವರ್ಗಗಳಲ್ಲಿ ಮಗುವಿನ ಹಕ್ಕುಗಳ ಬಗ್ಗೆ ಸಾಕ್ಷರತೆಯನ್ನು ಹರಡುವುದು ಮತ್ತು ಪ್ರಕಟಣೆಗಳ ಮೂಲಕ, ಮಾಧ್ಯಮದ ಮೂಲಕ, ವಿಚಾರ ಸಂಕಿರಣಗಳ ಮೂಲಕ ಮತ್ತು ಇತರ ಲಭ್ಯವಿರುವ ಸಾಧನಗಳ ಮೂಲಕ ಈ ಹಕ್ಕುಗಳ ರಕ್ಷಣೆಗಾಗಿ ಲಭ್ಯವಿರುವ ಸಂರಕ್ಷಣಾ ಕ್ರಮಗಳ ಬಗ್ಗೆ ಜಾಗೃತಿಯನ್ನು ಸಂವರ್ಧನೆಗೊಳಿಸುವುದು;

(ಐ) ಚಿಕಿತ್ಸೆ, ಸುಧಾರಣೆ ಅಥವಾ ರಕ್ಷಣೆಯ ಉದ್ದೇಶಕ್ಕಾಗಿ ಮಕ್ಕಳನ್ನು ತಡೆಹಿಡಿದಿಟ್ಟಿರುವ ಅಥವಾ ಇಟ್ಟುಕೊಂಡಿರುವ ಸಾಮಾಜಿಕ ಸಂಘಟನೆಯು ನಡೆಸುತ್ತಿರುವ ಯಾವುದೇ ಸಂಸ್ಥೆಯನ್ನು ಒಳಗೊಂಡಂತೆ, ಕೇಂದ್ರ ಸರ್ಕಾರದ ಅಥವಾ ಯಾವುದೇ ರಾಜ್ಯ ಸರ್ಕಾರದ ಅಥವಾ ಯಾವುದೇ ಇತರ ಪ್ರಾಧಿಕಾರದ ನಿಯಂತ್ರಣದಲ್ಲಿರುವ ಯಾವುದೇ ಬಾಲಕ ಅಭಿರಕ್ಷೆ ಗೃಹ ಅಥವಾ ಯಾವುದೇ ಇತರೆ ವಾಸದ ಸ್ಥಳ ಅಥವಾ ಸಂಸ್ಥೆಯನ್ನು ತಪಾಸಣೆ

ಮಾಡುವುದು ಅಥವಾ ತಪಾಸಣೆ ಮಾಡಿಸುವುದು ಮತ್ತು ಅಗತ್ಯವೆಂದು ಕಂಡುಬಂದರೆ, ಪರಿಹಾರ ಕ್ರಮಕ್ಕಾಗಿ ಈ ಪ್ರಾಧಿಕಾರಗಳೊಂದಿಗೆ ಸಹಕರಿಸುವುದು;

(ಜೆ) ಈ ಕೆಳಕಂಡ ವಿಷಯಗಳಿಗೆ ಸಂಬಂಧಿಸಿದ ದೂರುಗಳ ವಿಚಾರಣೆ ಮಾಡುವುದು; ಮತ್ತು ತಾನೇ ಆ ವಿಷಯಗಳ ಬಗ್ಗೆ ಗಮನ ನೀಡುವುದು, ಎಂದರೆ,–

(i) ಮಗುವಿನ ಹಕ್ಕುಗಳ ಹರಣ ಮತ್ತು ಉಲ್ಲಂಘನೆಯಾಗಿರುವುದು;

(ii) ಮಕ್ಕಳ ರಕ್ಷಣೆ ಮತ್ತು ಬೆಳವಣಿಗೆಗಾಗಿ ಉಪಬಂಧಿಸಿರುವ ಕಾನೂನುಗಳ ಅನುಷ್ಠಾನ ಮಾಡದಿರುವುದು;

(iii) ಮಕ್ಕಳ ಕಷ್ಟಗಳನ್ನು ನಿವಾರಿಸುವ ಮತ್ತು ಮಕ್ಕಳ ಕಲ್ಯಾಣವನ್ನು ಸುನಿಶ್ಚಿತಪಡಿಸಿಕೊಳ್ಳುವ ಮತ್ತು ಅಂಥ ಮಕ್ಕಳಿಗೆ ಪರಿಹಾರ ಒದಗಿಸುವ ಗುರಿ ಹೊಂದಿರುವ ಕಾರ್ಯನೀತಿಯ ನಿರ್ಧಾರಗಳನ್ನು, ಮಾರ್ಗದರ್ಶಿ ಸೂತ್ರಗಳನ್ನು ಅಥವಾ ಸೂಚನೆಗಳನ್ನು ಅನುಸರಿಸದಿರುವುದು

– ಅಥವಾ ಅಂಥ ವಿಷಯಗಳಿಂದ ಉದ್ಭವಿಸುವ ವಿವಾದಗಳನ್ನು ಯುಕ್ತ ಪ್ರಾಧಿಕಾರಗಳೊಂದಿಗೆ ಚರ್ಚಿಸುವುದು; ಮತ್ತು

(ಕೆ) ಮಗುವಿನ ಹಕ್ಕುಗಳನ್ನು ಸಂವರ್ಧನೆಗೊಳಿಸುವುದಕ್ಕಾಗಿ ಅದು ಅವಶ್ಯಕವೆಂದು ಪರಿಗಣಿಸಬಹುದಾದಂಥ ಇತರ ಪ್ರಕಾರ್ಯಗಳು ಮತ್ತು ಮೇಲಿನ ಪ್ರಕಾರ್ಯಗಳಿಗೆ ಆನುಷಂಗಿಕವಾದ ಯಾವುದೇ ಇತರ ವಿಷಯ.

(2) ರಾಜ್ಯ ಆಯೋಗದ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ಯುಕ್ತವಾಗಿ ರಚಿತವಾದ ಯಾವುದೇ ಇತರ ಆಯೋಗದ ಮುಂದೆ ಇತ್ಯರ್ಥದಲ್ಲಿರುವ ಯಾವುದೇ ವಿಷಯದ ಬಗ್ಗೆ ಆಯೋಗವು ವಿಚಾರಣೆ ನಡೆಸತಕ್ಕದ್ದಲ್ಲ.

**14. ವಿಚಾರಣೆಗೆ ಸಂಬಂಧಿಸಿದ ಅಧಿಕಾರಗಳು.–** (1) ಆಯೋಗವು 13ನೇ ಪ್ರಕರಣದ (1)ನೇ ಉಪ ಪ್ರಕರಣದ (ಜೆ) ಖಂಡದಲ್ಲಿ ಉಲ್ಲೇಖಿಸಿದ ಯಾವುದೇ ವಿಷಯದ ಬಗ್ಗೆ ವಿಚಾರಣೆ ನಡೆಸುವಾಗ ಮತ್ತು ವಿಶೇಷವಾಗಿ ಎಂದರೆ:–

(ಎ) ಯಾರೇ ವ್ಯಕ್ತಿಯನ್ನು ಸಮನು ಮಾಡುವುದು ಮತ್ತು ಅವನ ಹಾಜರಾತಿಯನ್ನು ಒತ್ತಾಯಪಡಿಸುವುದಕ್ಕೆ ಮತ್ತು ಅವನನ್ನು ಪ್ರಮಾಣದ ಮೇಲೆ ಪರೀಕ್ಷಿಸುವುದಕ್ಕೆ;

(ಬಿ) ಯಾವುದೇ ದಸ್ತಾವೇಜನ್ನು ಶೋಧಿಸಿ ಹಾಜರುಪಡಿಸುವುದಕ್ಕೆ;

(ಸಿ) ಶಪಥಪತ್ರಗಳ ಮೂಲಕ ಸಾಕ್ಷ್ಯವನ್ನು ಸ್ವೀಕರಿಸುವುದಕ್ಕೆ;

(ಡಿ) ಯಾವುದೇ ನ್ಯಾಯಾಲಯದಿಂದ ಅಥವಾ ಕಚೇರಿಯಿಂದ ಯಾವುದೇ ಸಾರ್ವಜನಿಕ ದಾಖಲೆಯನ್ನು ಅಥವಾ ಅದರ ಪ್ರತಿಯನ್ನು ಕಡ್ಡಾಯವಾಗಿ ಕೋರುವುದಕ್ಕೆ; ಮತ್ತು

(ಇ) ಸಾಕ್ಷಿದಾರರ ಅಥವಾ ದಸ್ತಾವೇಜುಗಳ ಪರೀಕ್ಷೆಗಾಗಿ ಕಮಿಷನ್ನುಗಳನ್ನು ಹೊರಡಿಸುವುದಕ್ಕೆ

– ಸಂಬಂಧಿಸಿದಂತೆ ಸಿವಿಲ್ ಪ್ರಕ್ರಿಯಾ ಸಂಹಿತೆ 1908 (1908ರ 5) ರ ಮೇರೆಗೆ ದಾವೆಯ ಅಧಿವಿಚಾರಣೆ ಮಾಡುವಾಗ ಸಿವಿಲ್ ನ್ಯಾಯಾಲಯವು ಹೊಂದಿರುವಂಥ ಎಲ್ಲಾ ಅಧಿಕಾರಗಳನ್ನು ಹೊಂದಿರತಕ್ಕದ್ದು.

(2) ಆಯೋಗವು, ಯಾವುದೇ ಪ್ರಕರಣವನ್ನು, ಅದನ್ನು ಅಧಿವಿಚಾರಣೆ ನಡೆಸಲು ಅಧಿಕಾರ ವ್ಯಾಪ್ತಿ ಹೊಂದಿರುವ ಮ್ಯಾಜಿಸ್ಟ್ರೇಟನಿಗೆ ಕಳುಹಿಸಲು ಅಧಿಕಾರ ಹೊಂದಿರತಕ್ಕದ್ದು ಮತ್ತು ಯಾವ ಮ್ಯಾಜಿಸ್ಟ್ರೇಟನಿಗೆ ಅಂಥ ಯಾವುದೇ ಪ್ರಕರಣವನ್ನು ಕಳುಹಿಸಲಾಗಿದೆಯೋ ಆ ಮ್ಯಾಜಿಸ್ಟ್ರೇಟನು ಆ ಪ್ರಕರಣವನ್ನು ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2)ರ 346ನೇ ಪ್ರಕರಣದ ಮೇರೆಗೆ ಅವನಿಗೆ ಆ ಪ್ರಕರಣವನ್ನು ಕಳುಹಿಸಲಾಗಿದ್ದರೆ ಹೇಗೋ ಹಾಗೆ ಆಪಾದಿತನ ವಿರುದ್ಧದ ದೂರನ್ನು ವಿಚಾರಣೆ ಮಾಡುವುದನ್ನು ಮುಂದುವರಿಸತಕ್ಕದ್ದು.

**15. ವಿಚಾರಣೆ ನಂತರದ ಕ್ರಮಗಳು.–** ಆಯೋಗವು, ಈ ಅಧಿನಿಯಮದ ಮೇರೆಗೆ ನಡೆಸಿದ ವಿಚಾರಣೆಯನ್ನು ಪೂರ್ಣಗೊಳಿಸಿದ ತರುವಾಯ ಈ ಮುಂದಿನ ಯಾವುವೇ ಕ್ರಮಗಳನ್ನು ಕೈಗೊಳ್ಳಬಹುದು, ಎಂದರೆ:–

(i) ಮಗುವಿನ ಹಕ್ಕುಗಳು ತೀವ್ರ ಸ್ವರೂಪದಲ್ಲಿ ಉಲ್ಲಂಘನೆಯಾಗಿರುವುದು ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಉಪಬಂಧಗಳು ಉಲ್ಲಂಘನೆಯಾಗಿರುವುದು ವಿಚಾರಣೆಯಿಂದ ಬಹಿರಂಗಗೊಂಡರೆ, ಆಯೋಗವು ಸಂಬಂಧಪಟ್ಟ ವ್ಯಕ್ತಿ ಅಥವಾ ವ್ಯಕ್ತಿಗಳ ವಿರುದ್ಧ ಪ್ರಾಸಿಕ್ಯೂಷನನ್ನು ಪ್ರಾರಂಭಿಸುವುದಕ್ಕೆ ಅಥವಾ ಅದು ಸೂಕ್ತವೆಂದು ಭಾವಿಸಬಹುದಾದಂಥ ಇತರ ಕ್ರಮಕೈಗೊಳ್ಳಲು ಸಂಬಂಧಪಟ್ಟ ಸರ್ಕಾರಕ್ಕೆ ಅಥವಾ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಬಹುದು;

(ii) ಆ ನ್ಯಾಯಾಲಯವು ಅಗತ್ಯವೆಂದು ಭಾವಿಸಬಹುದಾದಂಥ ನಿರ್ದೇಶನಗಳಿಗಾಗಿ, ಆದೇಶಗಳಿಗಾಗಿ ಅಥವಾ ರಿಟ್‌ಗಳಿಗಾಗಿ ಸರ್ವೋಚ್ಚ ನ್ಯಾಯಾಲಯವನ್ನು ಅಥವಾ ಸಂಬಂಧಪಟ್ಟ ಉಚ್ಚ ನ್ಯಾಯಾಲಯವನ್ನು ಸಂಪರ್ಕಿಸಬಹುದು;

(iii) ಬಲಿಪಶುವಾದವನಿಗೆ ಅಥವಾ ಆತನ ಕುಟುಂಬದ ಸದಸ್ಯರಿಗೆ ಆಯೋಗವು ಅವಶ್ಯಕವೆಂದು ಪರಿಗಣಿಸಬಹುದಾದಂಥ ಮಧ್ಯಂತರ ಪರಿಹಾರವನ್ನು ನೀಡುವುದಕ್ಕಾಗಿ ಸಂಬಂಧಪಟ್ಟ ಸರ್ಕಾರಕ್ಕೆ ಅಥವಾ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಬಹುದು.

**16. ಆಯೋಗದ ವಾರ್ಷಿಕ ಮತ್ತು ವಿಶೇಷ ವರದಿಗಳು.–** (1) ಆಯೋಗವು, ಕೇಂದ್ರ ಸರ್ಕಾರಕ್ಕೆ ಮತ್ತು ಸಂಬಂಧಪಟ್ಟ ರಾಜ್ಯ ಸರ್ಕಾರಕ್ಕೆ ವಾರ್ಷಿಕ ವರದಿಯನ್ನು ಸಲ್ಲಿಸತಕ್ಕದ್ದು ಮತ್ತು ಆಯೋಗದ ಅಭಿಪ್ರಾಯದಲ್ಲಿ ವಾರ್ಷಿಕ ವರದಿಯನ್ನು ಸಲ್ಲಿಸುವವರೆಗೆ ಮುಂದಕ್ಕೆ ಹಾಕಲಾಗದಷ್ಟು ತುರ್ತು ಅಥವಾ ಪ್ರಮುಖವಾಗಿರುವ ಯಾವುದೇ ವಿಷಯದ ಬಗ್ಗೆ ಯಾವುದೇ ಕಾಲದಲ್ಲಿ ವಿಶೇಷ ವರದಿಗಳನ್ನು ಸಲ್ಲಿಸಬಹುದು.

(2) ಕೇಂದ್ರ ಸರ್ಕಾರವು ಮತ್ತು ಸಂದರ್ಭಾನುಸಾರ, ಸಂಬಂಧಪಟ್ಟ ರಾಜ್ಯ ಸರ್ಕಾರವು, ಆಯೋಗದ ವಾರ್ಷಿಕ ಮತ್ತು ವಿಶೇಷ ವರದಿಗಳನ್ನು ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಅಥವಾ ಸಂಬಂಧಪಟ್ಟ ರಾಜ್ಯ ವಿಧಾನ ಮಂಡಲದ ಮುಂದೆ ಆಯೋಗದ ಶಿಫಾರಸ್ಸುಗಳ ಮೇಲೆ ತೆಗೆದುಕೊಂಡ ಅಥವಾ ತೆಗೆದುಕೊಳ್ಳಲು ಉದ್ದೇಶಿಸಿದ ಕ್ರಮದ ಜ್ಞಾಪನಾಪತ್ರದೊಂದಿಗೆ ಮತ್ತು ಶಿಫಾರಸ್ಸುಗಳನ್ನು ಒಪ್ಪಿಕೊಳ್ಳದಿರುವುದಕ್ಕೆ ಕಾರಣಗಳೇನಾದರೂ ಇದ್ದರೆ ಅವುಗಳನ್ನು ಅಂಥ ವರದಿಯನ್ನು ಸ್ವೀಕರಿಸಿದ ದಿನಾಂಕದಿಂದ ಒಂದು ವರ್ಷದ ಅವಧಿಯೊಳಗೆ ಇಡತಕ್ಕದ್ದು.

(3) ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ನಮೂನೆಯಲ್ಲಿ, ರೀತಿಯಲ್ಲಿ ಮತ್ತು ಅಂಥ ವಿವರಗಳನ್ನು ಒಳಗೊಂಡಿರುವ ವಾರ್ಷಿಕ ವರದಿಯನ್ನು ಸಿದ್ಧಪಡಿಸತಕ್ಕದ್ದು.

## ಅಧ್ಯಾಯ – IV
## ರಾಜ್ಯ ಮಗುವಿನ ಹಕ್ಕುಗಳ ರಕ್ಷಣಾ ಆಯೋಗ

**17. ರಾಜ್ಯ ಮಗುವಿನ ಹಕ್ಕುಗಳ ರಕ್ಷಣಾ ಆಯೋಗದ ರಚನೆ.–** (1) ರಾಜ್ಯ ಸರ್ಕಾರವು, ಈ ಅಧ್ಯಾಯದ ಮೇರೆಗೆ ರಾಜ್ಯ ಆಯೋಗಕ್ಕೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಲು ಮತ್ತು ಆಯೋಗಕ್ಕೆ ವಹಿಸಲಾದ ಪ್ರಕಾರ್ಯಗಳನ್ನು ನಿರ್ವಹಿಸಲು ––––– (ರಾಜ್ಯದ ಹೆಸರು) ಮಗುವಿನ ಹಕ್ಕುಗಳ ರಕ್ಷಣಾ ಆಯೋಗ ಎಂಬ ಹೆಸರಿನ ಒಂದು ನಿಕಾಯವನ್ನು ರಚಿಸಬಹುದು.

(2) ರಾಜ್ಯ ಆಯೋಗವು ಈ ಕೆಳಕಂಡ ಸದಸ್ಯರನ್ನು ಒಳಗೊಂಡಿರತಕ್ಕದ್ದು, ಎಂದರೆ:–

(ಎ) ಖ್ಯಾತ ವ್ಯಕ್ತಿಯಾಗಿದ್ದು ಮತ್ತು ಮಕ್ಕಳ ಕಲ್ಯಾಣವನ್ನು ಸಂವರ್ಧನೆಗೊಳಿಸುವ ಸಂಬಂಧದಲ್ಲಿ ಅಸಾಧಾರಣ ಕಾರ್ಯಮಾಡಿರುವ ವ್ಯಕ್ತಿಯಾಗಿರುವ ಅಧ್ಯಕ್ಷ; ಮತ್ತು

(ಬಿ) ಈ ಕೆಳಕಂಡ ಕ್ಷೇತ್ರಗಳಲ್ಲಿ ಎಂದರೆ:–

(i) ಶಿಕ್ಷಣ;

(ii) ಮಗುವಿನ ಆರೋಗ್ಯ, ಪಾಲನೆ, ಕಲ್ಯಾಣ ಅಥವಾ ಮಗುವಿನ ಬೆಳವಣಿಗೆ ;

(iii) ಬಾಲಕ ನ್ಯಾಯ ಅಥವಾ ನಿರ್ಲಕ್ಷಿತ ಅಥವಾ ಕಡೆಗಣಿಸಿದ ಮಕ್ಕಳ ಅಥವಾ ಅಸಮರ್ಥತೆಯುಳ್ಳ ಮಕ್ಕಳ ಪಾಲನೆ;

(iv) ಬಾಲ ಕಾರ್ಮಿಕ ಪದ್ಧತಿಯನ್ನು ತೊಡೆದು ಹಾಕುವುದು ಅಥವಾ ಸಂಕಷ್ಟದಲ್ಲಿರುವ ಮಕ್ಕಳ ರಕ್ಷಣೆ;

(v) ಮಗುವಿನ ಮನಶಾಸ್ತ್ರ ಅಥವಾ ಸಮಾಜಶಾಸ್ತ್ರ; ಮತ್ತು

(vi) ಮಕ್ಕಳಿಗೆ ಸಂಬಂಧಿಸಿರುವ ಕಾನೂನುಗಳು

– ಇವುಗಳಲ್ಲಿ ಖ್ಯಾತರಾದ, ಸಮರ್ಥರಾದ, ನಿಷ್ಠರಾದ, ಸ್ಥಾನಮಾನವುಳ್ಳ ಹಾಗೂ ಅನುಭವ ಹೊಂದಿರುವ ವ್ಯಕ್ತಿಗಳೊಳಗಿಂದ ಕೇಂದ್ರ ಸರ್ಕಾರವು ನೇಮಕ ಮಾಡುವ ಆರು ಸದಸ್ಯರು, ಇವರಲ್ಲಿ ಕನಿಷ್ಠ ಪಕ್ಷ ಇಬ್ಬರು ಮಹಿಳೆಯರು ಇರತಕ್ಕದ್ದು.

(3) ರಾಜ್ಯ ಆಯೋಗದ ಪ್ರಧಾನ ಕಚೇರಿಯು ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಸ್ಥಳದಲ್ಲಿ ಇರತಕ್ಕದ್ದು.

**18. ಅಧ್ಯಕ್ಷನ ಮತ್ತು ಇತರ ಸದಸ್ಯರ ನೇಮಕ.–** ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಅಧ್ಯಕ್ಷನನ್ನು ಮತ್ತು ಇತರ ಸದಸ್ಯರನ್ನು ನೇಮಕ ಮಾಡತಕ್ಕದ್ದು:

ಪರಂತು, ಮಕ್ಕಳ ಬಗೆಗಿನ ವಿಷಯಗಳನ್ನು ನಿರ್ವಹಿಸುತ್ತಿರುವ ಇಲಾಖೆಯ ಪ್ರಭಾರದಲ್ಲಿರುವ ಸಚಿವರ ಅಧ್ಯಕ್ಷತೆಯಲ್ಲಿ ರಾಜ್ಯ ಸರ್ಕಾರವು ಮೂವರು ಸದಸ್ಯರನ್ನೊಳಗೊಂಡ ಆಯ್ಕೆ ಸಮಿತಿಯ ಶಿಫಾರಸ್ಸಿನ ಮೇಲೆ ಅಧ್ಯಕ್ಷನನ್ನು ನೇಮಕ ಮಾಡತಕ್ಕದ್ದು.

**19. ಅಧ್ಯಕ್ಷನ ಮತ್ತು ಸದಸ್ಯರ ಪದಾವಧಿ ಮತ್ತು ಸೇವಾ ಷರತ್ತುಗಳು.–** (1) ಅಧ್ಯಕ್ಷನು ಮತ್ತು ಪ್ರತಿಯೊಬ್ಬ ಸದಸ್ಯನು, ಆತನು ಪದಧಾರಣ ಮಾಡಿದ ದಿನಾಂಕದಿಂದ ಮೂರು ವರ್ಷಗಳ ಅವಧಿಯವರೆಗೆ ಅಂಥ ಪದವನ್ನು ಧಾರಣ ಮಾಡಿರತಕ್ಕದ್ದು:

ಪರಂತು, ಅಧ್ಯಕ್ಷನು ಅಥವಾ ಸದಸ್ಯನು ಎರಡು ಅವಧಿಗಿಂತ ಹೆಚ್ಚು ಅವಧಿಗಾಗಿ ಪದಧಾರಣ ಮಾಡತಕ್ಕದ್ದಲ್ಲ:

ಮತ್ತೂ ಪರಂತು, ಅಧ್ಯಕ್ಷನು ಅಥವಾ ಯಾರೇ ಇತರ ಸದಸ್ಯನು, ಅವನಿಗೆ,–

(ಎ) ಅಧ್ಯಕ್ಷನ ಸಂದರ್ಭದಲ್ಲಿ ಅರವತ್ತೈದು ವರ್ಷಗಳ ವಯಸ್ಸು; ಮತ್ತು

(ಬಿ) ಸದಸ್ಯರ ಸಂದರ್ಭದಲ್ಲಿ ಅರವತ್ತು ವರ್ಷಗಳ ವಯಸ್ಸು

– ತುಂಬಿದ ತರುವಾಯ ಅಂಥ ಪದಧಾರಣ ಮಾಡತಕ್ಕದ್ದಲ್ಲ.

(2) ಅಧ್ಯಕ್ಷನು ಅಥವಾ ಸದಸ್ಯನು ಯಾವುದೇ ಕಾಲದಲ್ಲಿ ರಾಜ್ಯ ಸರ್ಕಾರಕ್ಕೆ ಲಿಖಿತದಲ್ಲಿ ತಾನು ಸಹಿ ಮಾಡಿದ ಪತ್ರವನ್ನು ಕಳುಹಿಸುವ ಮೂಲಕ ತನ್ನ ಪದಕ್ಕೆ ರಾಜೀನಾಮೆ ನೀಡಬಹುದು.

**20. ಅಧ್ಯಕ್ಷನ ಮತ್ತು ಸದಸ್ಯರ ಸಂಬಳ ಮತ್ತು ಭತ್ಯಗಳು.–** ಅಧ್ಯಕ್ಷನಿಗೆ ಮತ್ತು ಸದಸ್ಯರಿಗೆ ಸಂದಾಯ ಮಾಡಬಹುದಾದ ಸಂಬಳ ಮತ್ತು ಭತ್ಯಗಳು ಮತ್ತು ಇತರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು ರಾಜ್ಯ ಸರ್ಕಾರವು ನಿಯಮಿಸಬಹುದಾದಂತೆ ಇರತಕ್ಕದ್ದು:

ಪರಂತು, ಅಧ್ಯಕ್ಷನ ಅಥವಾ ಸಂದರ್ಭಾನುಸಾರ, ಸದಸ್ಯನ ಸಂಬಳ ಮತ್ತು ಭತ್ಯೆಗಳನ್ನಾಗಲಿ ಅಥವಾ ಇತರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳನ್ನಾಗಲಿ ಅವನ ನೇಮಕದ ತರುವಾಯ ಅವನಿಗೆ ಅನಾನುಕೂಲವಾಗುವ ರೀತಿಯಲ್ಲಿ ವ್ಯತ್ಯಾಸಗೊಳಿಸತಕ್ಕದಲ್ಲ.

**21. ರಾಜ್ಯ ಆಯೋಗದ ಕಾರ್ಯದರ್ಶಿ, ಅಧಿಕಾರಿಗಳು ಮತ್ತು ಇತರ ನೌಕರರು.–** (1) ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ ರಾಜ್ಯ ಸರ್ಕಾರದ ಕಾರ್ಯದರ್ಶಿಯನ್ನು ಅಥವಾ ಕಾರ್ಯದರ್ಶಿಯ ದರ್ಜೆಗಿಂತ ಕಡಿಮೆಯಿರದ ಅಧಿಕಾರಿಯನ್ನು ರಾಜ್ಯ ಆಯೋಗದ ಕಾರ್ಯದರ್ಶಿಯನ್ನಾಗಿ ನೇಮಕ ಮಾಡತಕ್ಕದ್ದು ಮತ್ತು ರಾಜ್ಯ ಆಯೋಗದ ಪ್ರಕಾರ್ಯಗಳ ದಕ್ಷ ನಿರ್ವಹಣೆಗಾಗಿ ಅವಶ್ಯಕವಾಗಬಹುದಾದಂಥ ಇತರ ಅಧಿಕಾರಿಗಳನ್ನು ಮತ್ತು ನೌಕರರನ್ನು ರಾಜ್ಯ ಆಯೋಗಕ್ಕೆ ಒದಗಿಸತಕ್ಕದ್ದು.

(2) ರಾಜ್ಯ ಆಯೋಗದ ವ್ಯವಹಾರಗಳ ಯುಕ್ತ ನಿರ್ವಹಣೆಗಾಗಿ ಮತ್ತು ಅದರ ದಿನನಿತ್ಯದ ವ್ಯವಸ್ಥಾಪನೆಗಾಗಿ ಕಾರ್ಯದರ್ಶಿಯು ಜವಾಬ್ದಾರನಾಗಿರತಕ್ಕದ್ದು ಮತ್ತು ರಾಜ್ಯ ಸರ್ಕಾರವು ನಿಯಮಿಸಬಹುದಾದಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಹಾಗೂ ನಿರ್ವಹಿಸತಕ್ಕದ್ದು ಮತ್ತು ಅಂಥ ಇತರ ಕರ್ತವ್ಯಗಳನ್ನು ನೆರವೇರಿಸತಕ್ಕದ್ದು.

(3) ರಾಜ್ಯ ಆಯೋಗದ ಉದ್ದೇಶಕ್ಕಾಗಿ ನೇಮಕಗೊಂಡ ಕಾರ್ಯದರ್ಶಿಗೆ, ಇತರ ಅಧಿಕಾರಿಗಳಿಗೆ ಮತ್ತು ನೌಕರರಿಗೆ ಸಂದಾಯ ಮಾಡಬೇಕಾದ ಸಂಬಳ ಮತ್ತು ಭತ್ಯಗಳು ಮತ್ತು ಅವರ ಇತರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು ರಾಜ್ಯ ಸರ್ಕಾರವು ನಿಯಮಿಸಬಹುದಾದಂತೆ ಇರತಕ್ಕದ್ದು.

**22. ಸಂಬಳ ಮತ್ತು ಭತ್ಯಗಳನ್ನು ಅನುದಾನಗಳಿಂದ ಸಂದಾಯ ಮಾಡುವುದು.–** 21ನೇ ಪ್ರಕರಣದಲ್ಲಿ ಉಲ್ಲೇಖಿಸಿದ ಕಾರ್ಯದರ್ಶಿಗೆ, ಇತರ ಅಧಿಕಾರಿಗಳಿಗೆ ಮತ್ತು ನೌಕರರಿಗೆ ಸಂದಾಯ ಮಾಡಲಾಗುವ ಸಂಬಳಗಳು, ಭತ್ಯಗಳು ಮತ್ತು ನಿವೃತ್ತಿ ವೇತನಗಳು ಸೇರಿದಂತೆ, ಅಧ್ಯಕ್ಷನಿಗೆ ಮತ್ತು ಸದಸ್ಯರಿಗೆ ಸಂದಾಯ ಮಾಡಲಾಗುವ ಸಂಬಳಗಳನ್ನು, ಭತ್ಯಗಳನ್ನು ಮತ್ತು ಆಡಳಿತಾತ್ಮಕ ವೆಚ್ಚಗಳನ್ನು 28ನೇ ಪ್ರಕರಣದ (1)ನೇ ಉಪ ಪ್ರಕರಣದಲ್ಲಿ ಉಲ್ಲೇಖಿಸಿದ ಅನುದಾನಗಳಿಂದ ಸಂದಾಯ ಮಾಡತಕ್ಕದ್ದು.

**23. ರಾಜ್ಯ ಆಯೋಗದ ವಾರ್ಷಿಕ ಮತ್ತು ವಿಶೇಷ ವರದಿಗಳು.–** (1) ಆಯೋಗವು, ರಾಜ್ಯ ಸರ್ಕಾರಕ್ಕೆ ವಾರ್ಷಿಕ ವರದಿಯನ್ನು ಸಲ್ಲಿಸತಕ್ಕದ್ದು ಮತ್ತು ರಾಜ್ಯ ಆಯೋಗದ ಅಭಿಪ್ರಾಯದಲ್ಲಿ ವಾರ್ಷಿಕ ವರದಿಯನ್ನು ಸಲ್ಲಿಸುವವರೆಗೆ ಮುಂದಕ್ಕೆ ಹಾಕಲಾಗದಷ್ಟು ತುರ್ತು ಅಥವಾ ಪ್ರಮುಖವಾಗಿರುವ ಯಾವುದೇ ವಿಷಯದ ಬಗ್ಗೆ ಯಾವುದೇ ಕಾಲದಲ್ಲಿ ವಿಶೇಷ ವರದಿಗಳನ್ನು ಸಲ್ಲಿಸಬಹುದು.

(2) ರಾಜ್ಯ ಸರ್ಕಾರವು, (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಎಲ್ಲಾ ವರದಿಗಳನ್ನು ವಿಧಾನ ಮಂಡಲವು ಎರಡು ಸದನಗಳನ್ನು ಒಳಗೊಂಡಿದ್ದಲ್ಲಿ ಪ್ರತಿಯೊಂದು ಸದನದ ಮುಂದೆ ಅಥವಾ ಒಂದೇ ಸದನವನ್ನು ಒಳಗೊಂಡಿದ್ದಲ್ಲಿ ಆ ಸದನದ ಮುಂದೆ ರಾಜ್ಯಕ್ಕೆ ಸಂಬಂಧಿಸಿರುವ ಶಿಫಾರಸ್ಸುಗಳ ಮೇಲೆ ತೆಗೆದುಕೊಂಡ ಅಥವಾ ತೆಗೆದುಕೊಳ್ಳಲು ಉದ್ದೇಶಿಸಿದ ಕ್ರಮವನ್ನು ವಿವರಿಸುವ ಜ್ಞಾಪನಾಪತ್ರದೊಂದಿಗೆ ಮತ್ತು ಅಂತಹ ಯಾವುದೇ ಶಿಫಾರಸ್ಸುಗಳನ್ನು ಒಪ್ಪಿಕೊಳ್ಳದಿರುವುದಕ್ಕೆ ಕಾರಣಗಳೇನಾದರೂ ಇದ್ದರೆ ಅವುಗಳನ್ನು ಮಂಡಿಸತಕ್ಕದ್ದು.

(3) ರಾಜ್ಯ ಸರ್ಕಾರವು ನಿಯಮಿಸಬಹುದಾದಂಥ ನಮೂನೆಯಲ್ಲಿ, ರೀತಿಯಲ್ಲಿ ಮತ್ತು ಅಂಥ ವಿವರಗಳನ್ನು ಒಳಗೊಂಡಿರುವ ವಾರ್ಷಿಕ ವರದಿಯನ್ನು ಸಿದ್ಧಪಡಿಸತಕ್ಕದ್ದು.

**24. ರಾಷ್ಟ್ರೀಯ ಮಗುವಿನ ಹಕ್ಕುಗಳ ರಕ್ಷಣಾ ಆಯೋಗಕ್ಕೆ ಸಂಬಂಧಿಸಿರುವ ಕೆಲವು ಉಪಬಂಧಗಳನ್ನು ರಾಜ್ಯ ಆಯೋಗಗಳಿಗೆ ಅನ್ವಯಿಸುವುದು.–** 7,8,9,10ನೇ ಪ್ರಕರಣಗಳ ಉಪಬಂಧಗಳು, 13ನೇ ಪ್ರಕರಣದ (1)ನೇ ಉಪ ಪ್ರಕರಣದ ಮತ್ತು 14ನೇ ಹಾಗೂ 15ನೇ ಪ್ರಕರಣಗಳ ಉಪಬಂಧಗಳು ರಾಜ್ಯ ಆಯೋಗಕ್ಕೆ ಅನ್ವಯವಾಗತಕ್ಕದ್ದು ಮತ್ತು ಈ ಮುಂದಿನ ಮಾರ್ಪಾಡುಗಳಿಗೆ ಒಳಪಟ್ಟು ಪರಿಣಾಮಕಾರಿಯಾಗತಕ್ಕದ್ದು, ಎಂದರೆ:–

(ಎ) "ಆಯೋಗ"ಕ್ಕೆ ಮಾಡಿರುವ ಉಲ್ಲೇಖಗಳನ್ನು "ರಾಜ್ಯ ಆಯೋಗ"ಕ್ಕೆ ಮಾಡಿರುವ ಉಲ್ಲೇಖಗಳೆಂದು ಅರ್ಥೈಸತಕ್ಕದ್ದು;

(ಬಿ) "ಕೇಂದ್ರ ಸರ್ಕಾರ"ಕ್ಕೆ ಮಾಡಿರುವ ಉಲ್ಲೇಖಗಳನ್ನು "ರಾಜ್ಯ ಸರ್ಕಾರ"ಕ್ಕೆ ಮಾಡಿರುವ ಉಲ್ಲೇಖಗಳೆಂದು ಅರ್ಥೈಸತಕ್ಕದ್ದು; ಮತ್ತು

(ಸಿ) "ಸದಸ್ಯ–ಕಾರ್ಯದರ್ಶಿ"ಗೆ ಮಾಡಿರುವ ಉಲ್ಲೇಖಗಳನ್ನು "ಕಾರ್ಯದರ್ಶಿ"ಗೆ ಮಾಡಿರುವ ಉಲ್ಲೇಖಗಳೆಂದು ಅರ್ಥೈಸತಕ್ಕದ್ದು.

## ಅಧ್ಯಾಯ–V
## ಮಕ್ಕಳ ನ್ಯಾಯಾಲಯಗಳು

**25. ಮಕ್ಕಳ ನ್ಯಾಯಾಲಯಗಳು.–** ಮಕ್ಕಳ ವಿರುದ್ಧದ ಅಥವಾ ಮಗುವಿನ ಹಕ್ಕುಗಳ ಉಲ್ಲಂಘನೆಯ ಅಪರಾಧಗಳನ್ನು ತ್ವರಿತ ವಿಚಾರಣೆ ಮಾಡುವ ಉದ್ದೇಶಕ್ಕಾಗಿ, ರಾಜ್ಯ ಸರ್ಕಾರವು ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿ ಸಹಮತಿಯೊಂದಿಗೆ, ಅಧಿಸೂಚನೆಯ ಮೂಲಕ ರಾಜ್ಯದಲ್ಲಿ ಕನಿಷ್ಠ ಪಕ್ಷ ಒಂದು ನ್ಯಾಯಾಲಯವನ್ನು ನಿರ್ದಿಷ್ಟಪಡಿಸತಕ್ಕದ್ದು ಅಥವಾ ಸದರಿ ಅಪರಾಧಗಳ ವಿಚಾರಣೆಗಾಗಿ ಪ್ರತಿಯೊಂದು ಜಿಲ್ಲೆಗೆ ಸೆಷನ್ಸ್ ನ್ಯಾಯಾಲಯವನ್ನು ಮಕ್ಕಳ ನ್ಯಾಯಾಲಯವೆಂದು ನಿರ್ದಿಷ್ಟಪಡಿಸತಕ್ಕದ್ದು:

ಪರಂತು, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಮೇರೆಗೆ ಅಂಥ ಅಪರಾಧಗಳಿಗಾಗಿ,-

(ಎ) ಈಗಾಗಲೇ ಸೆಷನ್ಸ್ ನ್ಯಾಯಾಲಯವನ್ನು ವಿಶೇಷ ನ್ಯಾಯಾಲಯವೆಂದು ನಿರ್ದಿಷ್ಟಪಡಿಸಿದ್ದರೆ; ಅಥವಾ

(ಬಿ) ಈಗಾಗಲೇ ವಿಶೇಷ ನ್ಯಾಯಾಲಯವೊಂದನ್ನು ಸ್ಥಾಪಿಸಿದ್ದರೆ

– ಈ ಪ್ರಕರಣದಲ್ಲಿರುವುದು ಯಾವುದೂ ಅನ್ವಯವಾಗತಕ್ಕದ್ದಲ್ಲ.

**26. ವಿಶೇಷ ಸರ್ಕಾರೀ ಪ್ರಾಸಿಕ್ಯೂಟರ್.–** ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಪ್ರತಿಯೊಂದು ಮಕ್ಕಳ ನ್ಯಾಯಾಲಯಕ್ಕೆ ಆ ನ್ಯಾಯಾಲಯದಲ್ಲಿ ಪ್ರಕರಣಗಳನ್ನು ನಡೆಸುವ ಉದ್ದೇಶಕ್ಕಾಗಿ ಸರ್ಕಾರೀ ಪ್ರಾಸಿಕ್ಯೂಟರ್‌ನನ್ನು ಅಥವಾ ಏಳು ವರ್ಷಗಳಿಗಿಂತ ಕಡಿಮೆಯಲ್ಲದ ಅವಧಿಯವರೆಗೆ ನ್ಯಾಯವಾದಿಯಾಗಿ ಕಾರ್ಯನಿರ್ವಹಿಸಿದ ವೃತ್ತಿನಿರತ ನ್ಯಾಯವಾದಿಯನ್ನು ವಿಶೇಷ ಸರ್ಕಾರಿ ಪ್ರಾಸಿಕ್ಯೂಟರ್‌ನನ್ನಾಗಿ ನೇಮಕ ಮಾಡತಕ್ಕದ್ದು.

## ಅಧ್ಯಾಯ – VI
## ಹಣಕಾಸು, ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ

**27. ಕೇಂದ್ರ ಸರ್ಕಾರದಿಂದ ಅನುದಾನಗಳು.–** (1) ಸಂಸತ್ತು ಕಾನೂನು ಮೂಲಕ ಈ ಬಗ್ಗೆ ಸೂಕ್ತ ಧನ ವಿನಿಯೋಗ ಮಾಡಿದ ತರುವಾಯ, ಕೇಂದ್ರ ಸರ್ಕಾರವು ಈ ಅಧಿನಿಯಮದ ಉದ್ದೇಶಗಳಿಗೆ ಬಳಸುವುದಕ್ಕಾಗಿ ತಾನು ಸೂಕ್ತವೆಂದು ಭಾವಿಸಬಹುದಾದಂಥ ಮೊತ್ತವನ್ನು ಅನುದಾನಗಳ ರೂಪದಲ್ಲಿ ಆಯೋಗಕ್ಕೆ ಸಂದಾಯ ಮಾಡಬಹುದು.

(2) ಆಯೋಗವು ಈ ಅಧಿನಿಯಮದ ಮೇರೆಗಿನ ಪ್ರಕಾರ್ಯಗಳನ್ನು ನಿರ್ವಹಿಸುವುದಕ್ಕೆ ತಾನು ಸೂಕ್ತವೆಂದು ಭಾವಿಸಬಹುದಾದಂಥ ಮೊತ್ತವನ್ನು ಖರ್ಚು ಮಾಡಬಹುದು ಮತ್ತು ಅಂಥ ಮೊತ್ತಗಳನ್ನು (1)ನೇ ಉಪ ಪ್ರಕರಣದಲ್ಲಿ ಉಲ್ಲೇಖಿಸಿದ ಅನುದಾನಗಳಿಂದ ಸಂದಾಯ ಮಾಡಬಹುದಾದ ವೆಚ್ಚವೆಂದು ಪರಿಗಣಿಸತಕ್ಕದ್ದು.

**28. ರಾಜ್ಯ ಸರ್ಕಾರಗಳಿಂದ ಅನುದಾನಗಳು.–** (1) ವಿಧಾನ ಮಂಡಲವು ಕಾನೂನು ಮೂಲಕ ಈ ಬಗ್ಗೆ ಸೂಕ್ತ ಧನವಿನಿಯೋಗ ಮಾಡಿದ ತರುವಾಯ, ರಾಜ್ಯ ಸರ್ಕಾರವು ಈ ಅಧಿನಿಯಮದ ಉದ್ದೇಶಗಳಿಗಾಗಿ ಬಳಸುವುದಕ್ಕೆ ತಾನು ಸೂಕ್ತವೆಂದು ಭಾವಿಸಬಹುದಾದಂಥ ಮೊತ್ತವನ್ನು ಅನುದಾನಗಳ ರೂಪದಲ್ಲಿ  ರಾಜ್ಯ ಆಯೋಗಕ್ಕೆ ಸಂದಾಯ ಮಾಡತಕ್ಕದ್ದು.

(2) ರಾಜ್ಯ ಆಯೋಗವು ಈ ಅಧಿನಿಯಮದ ಅಧ್ಯಾಯ **III**ರ ಮೇರೆಗಿನ ಪ್ರಕಾರ್ಯಗಳನ್ನು ನಿರ್ವಹಿಸುವುದಕ್ಕಾಗಿ ತಾನು ಸೂಕ್ತವೆಂದು ಭಾವಿಸಬಹುದಾದಂಥ ಮೊತ್ತವನ್ನು ಖರ್ಚು ಮಾಡಬಹುದು

ಮತ್ತು ಅಂಥ ಮೊತ್ತಗಳನ್ನು (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಅನುದಾನಗಳಿಂದ ಸಂದಾಯ ಮಾಡಬಹುದಾದ ವೆಚ್ಚವೆಂದು ಪರಿಗಣಿಸತಕ್ಕದ್ದು.

**29. ಆಯೋಗದ ಲೆಕ್ಕಪತ್ರಗಳು ಮತ್ತು ಲೆಕ್ಕ ಪರಿಶೋಧನೆ.–** (1) ಆಯೋಗವು, ಲೆಕ್ಕಪತ್ರಗಳನ್ನು ಮತ್ತು ಇತರ ಸುಸಂಗತ ದಾಖಲೆಗಳನ್ನು ಇಟ್ಟುಕೊಂಡು ಬರತಕ್ಕದ್ದು ಮತ್ತು ಭಾರತದ ಲೆಕ್ಕನಿಯಂತ್ರಕ–ಹಾಗೂ–ಮಹಾ ಲೆಕ್ಕಪರಿಶೋಧಕನೊಂದಿಗೆ ಸಮಾಲೋಚಿಸಿ ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ನಮೂನೆಯಲ್ಲಿ ವಾರ್ಷಿಕ ಲೆಕ್ಕಪತ್ರಗಳ ವಿವರ ಪಟಿಕ್ಟೆಯನ್ನು ತಯಾರಿಸತಕ್ಕದ್ದು.

(2) ಆಯೋಗದ ಲೆಕ್ಕಪತ್ರಗಳನ್ನು ಲೆಕ್ಕನಿಯಂತ್ರಕ–ಹಾಗೂ–ಮಹಾ ಲೆಕ್ಕಪರಿಶೋಧಕನು, ಅವನು ನಿರ್ದಿಷ್ಟಪಡಿಸಬಹುದಾದಂಥ ಮಧ್ಯಂತರಗಳಲ್ಲಿ ಪರಿಶೋಧಿಸತಕ್ಕದ್ದು ಮತ್ತು ಅಂಥ ಲೆಕ್ಕ ಪರಿಶೋಧನೆಗೆ ಸಂಬಂಧಪಟ್ಟಂತೆ ವಹಿಸಿದ ಯಾವುದೇ ವೆಚ್ಚವನ್ನು ಆಯೋಗವು ಲೆಕ್ಕ ನಿಯಂತ್ರಕ–ಹಾಗೂ–ಮಹಾ ಲೆಕ್ಕಪರಿಶೋಧಕನಿಗೆ ಸಂದಾಯ ಮಾಡತಕ್ಕದ್ದು.

(3) ಲೆಕ್ಕನಿಯಂತ್ರಕ–ಹಾಗೂ–ಮಹಾ ಲೆಕ್ಕಪರಿಶೋಧಕನು ಮತ್ತು ಈ ಅಧಿನಿಯಮದ ಮೇರೆಗೆ ಆಯೋಗದ ಲೆಕ್ಕಪತ್ರಗಳನ್ನು ಪರಿಶೋಧಿಸುವ ಸಂಬಂಧದಲ್ಲಿ ಅವನಿಂದ ನೇಮಕಗೊಂಡ ಯಾರೇ ವ್ಯಕ್ತಿಯು ಸರ್ಕಾರಿ ಲೆಕ್ಕಪತ್ರಗಳ ಪರಿಶೋಧನೆಯ ಸಂಬಂಧದಲ್ಲಿ ಲೆಕ್ಕನಿಯಂತ್ರಕ–ಹಾಗೂ–ಮಹಾ ಲೆಕ್ಕಪರಿಶೋಧಕನು ಅಂಥ ಲೆಕ್ಕ ಪರಿಶೋಧನೆಯ ಸಂಬಂಧದಲ್ಲಿ ಹೊಂದಿರುವಂಥ ಹಕ್ಕುಗಳನ್ನು ಮತ್ತು ವಿಶೇಷಾಧಿಕಾರಗಳನ್ನು ಮತ್ತು ಅಧಿಕಾರವನ್ನು ಹೊಂದಿರತಕ್ಕದ್ದು ಮತ್ತು ವಿಶೇಷವಾಗಿ, ಪುಸ್ತಕಗಳನ್ನು, ಲೆಕ್ಕಪತ್ರಗಳನ್ನು, ಸಂಬಂಧಪಟ್ಟ ಓಚರುಗಳನ್ನು, ಇತರ ದಸ್ತಾವೇಜುಗಳನ್ನು ಮತ್ತು ಕಾಗದ ಪತ್ರಗಳನ್ನು ಹಾಜರುಪಡಿಸುವಂತೆ ತಗಾದೆ ಮಾಡುವ ಹಾಗೂ ಆಯೋಗದ ಯಾವುದೇ ಕಚೇರಿಗಳ ತಪಾಸಣೆ ಮಾಡುವ ಹಕ್ಕನ್ನು ಹೊಂದಿರತಕ್ಕದ್ದು.

(4) ಲೆಕ್ಕನಿಯಂತ್ರಕ–ಹಾಗೂ–ಮಹಾಲೆಕ್ಕಪರಿಶೋಧಕನು ಅಥವಾ ಅವನಿಂದ ಈ ಬಗ್ಗೆ ನೇಮಕಗೊಂಡ ಇತರ ಯಾರೇ ವ್ಯಕ್ತಿಯು ಪ್ರಮಾಣೀಕರಿಸಿದ ಆಯೋಗದ ಲೆಕ್ಕಪತ್ರಗಳನ್ನು ಅದರ ಲೆಕ್ಕ ಪರಿಶೋಧನಾ ವರದಿಯ ಜೊತೆಗೆ ಆಯೋಗವು ಪ್ರತಿವರ್ಷ ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಡತಕ್ಕದ್ದು ಮತ್ತು ಕೇಂದ್ರ ಸರ್ಕಾರವು ಆ ಲೆಕ್ಕಪರಿಶೋಧನಾ ವರದಿಯನ್ನು ಸ್ವೀಕರಿಸಿದ ನಂತರ ಆದಷ್ಟು ಬೇಗನೆ ಸಂಸತ್ತಿನ ಉಭಯ ಸದನಗಳ ಮುಂದೆ ಅದನ್ನು ಇಡುವಂತೆ ಮಾಡತಕ್ಕದ್ದು.

**30. ರಾಜ್ಯ ಆಯೋಗದ ಲೆಕ್ಕಪತ್ರಗಳು ಮತ್ತು ಲೆಕ್ಕ ಪರಿಶೋಧನೆ.–** (1) ರಾಜ್ಯ ಆಯೋಗವು, ಲೆಕ್ಕಪತ್ರಗಳನ್ನು ಮತ್ತು ಇತರ ಸುಸಂಗತ ದಾಖಲೆಗಳನ್ನು ಇಟ್ಟುಕೊಂಡು ಬರತಕ್ಕದ್ದು ಮತ್ತು ಭಾರತದ ಲೆಕ್ಕನಿಯಂತ್ರಕ–ಹಾಗೂ–ಮಹಾಲೆಕ್ಕಪರಿಶೋಧಕನೊಂದಿಗೆ ಸಮಾಲೋಚಿಸಿ ರಾಜ್ಯ ಸರ್ಕಾರವು ನಿಯಮಿಸಬಹುದಾದಂಥ ನಮೂನೆಯಲ್ಲಿ ವಾರ್ಷಿಕ ಲೆಕ್ಕಪತ್ರಗಳ ವಿವರ ಪಟ್ಟಿಕೆಯನ್ನು ತಯಾರಿಸತಕ್ಕದ್ದು.

(2) ರಾಜ್ಯ ಆಯೋಗದ ಲೆಕ್ಕಪತ್ರಗಳನ್ನು ಲೆಕ್ಕನಿಯಂತ್ರಕ–ಹಾಗೂ–ಮಹಾ ಲೆಕ್ಕಪರಿಶೋಧಕನು ಅವನು ನಿರ್ದಿಷ್ಟಪಡಿಸಬಹುದಾದಂಥ ಮಧ್ಯಂತರಗಳಲ್ಲಿ ಪರಿಶೋಧಿಸತಕ್ಕದ್ದು ಮತ್ತು ಅಂಥ ಲೆಕ್ಕ ಪರಿಶೋಧನೆಗೆ ಸಂಬಂಧಪಟ್ಟಂತೆ ವಹಿಸಿದ ಯಾವುದೇ ವೆಚ್ಚವನ್ನು ರಾಜ್ಯ ಆಯೋಗವು ಲೆಕ್ಕನಿಯಂತ್ರಕ–ಹಾಗೂ– ಮಹಾ ಲೆಕ್ಕಪರಿಶೋಧಕನಿಗೆ ಸಂದಾಯ ಮಾಡತಕ್ಕದ್ದು.

(3) ಲೆಕ್ಕನಿಯಂತ್ರಕ–ಹಾಗೂ–ಮಹಾ ಲೆಕ್ಕಪರಿಶೋಧಕನು ಮತ್ತು ಈ ಅಧಿನಿಯಮದ ಮೇರೆಗೆ ರಾಜ್ಯ ಆಯೋಗದ ಲೆಕ್ಕಪತ್ರಗಳನ್ನು ಪರಿಶೋಧಿಸುವ ಸಂಬಂಧದಲ್ಲಿ ಅವನಿಂದ ನೇಮಕಗೊಂಡ ಯಾರೇ ವ್ಯಕ್ತಿಯು ಸರ್ಕಾರಿ ಲೆಕ್ಕಪತ್ರಗಳ ಪರಿಶೋಧನೆಯ ಸಂಬಂಧದಲ್ಲಿ ಲೆಕ್ಕನಿಯಂತ್ರಕ–ಹಾಗೂ–ಮಹಾ ಲೆಕ್ಕಪರಿಶೋಧಕನು ಅಂಥ ಲೆಕ್ಕ ಪರಿಶೋಧನೆಯ ಸಂಬಂಧದಲ್ಲಿ ಹೊಂದಿರುವಂಥ ಹಕ್ಕುಗಳನ್ನು ಮತ್ತು ವಿಶೇಷಾಧಿಕಾರಗಳನ್ನು ಮತ್ತು ಅಧಿಕಾರವನ್ನು ಹೊಂದಿರತಕ್ಕದ್ದು ಮತ್ತು ವಿಶೇಷವಾಗಿ, ಪುಸ್ತಕಗಳನ್ನು, ಲೆಕ್ಕಪತ್ರಗಳನ್ನು, ಸಂಬಂಧಪಟ್ಟ ಓಚರುಗಳನ್ನು, ಇತರ ದಸ್ತಾವೇಜುಗಳನ್ನು ಮತ್ತು ಕಾಗದ ಪತ್ರಗಳನ್ನು ಹಾಜರುಪಡಿಸುವಂತೆ ತಗಾದೆ ಮಾಡುವ ಹಾಗೂ ರಾಜ್ಯ ಆಯೋಗದ ಯಾವುದೇ ಕಚೇರಿಗಳ ತಪಾಸಣೆ ಮಾಡುವ ಹಕ್ಕನ್ನು ಹೊಂದಿರತಕ್ಕದ್ದು.

(4) ಲೆಕ್ಕನಿಯಂತ್ರಕ–ಹಾಗೂ–ಮಹಾ ಲೆಕ್ಕಪರಿಶೋಧಕನು ಅಥವಾ ಅವನಿಂದ ಈ ಬಗ್ಗೆ ನೇಮಕಗೊಂಡ ಇತರ ಯಾರೇ ವ್ಯಕ್ತಿಯು ಪ್ರಮಾಣೀಕರಿಸಿ ಆಯೋಗದ ಲೆಕ್ಕಪತ್ರಗಳನ್ನು ಅದರ ಲೆಕ್ಕ ಪರಿಶೋಧನಾ ವರದಿಯ ಜೊತೆಗೆ ಆ ಆಯೋಗವು ಪ್ರತಿವರ್ಷ ರಾಜ್ಯ ಸರ್ಕಾರಕ್ಕೆ ಕಳುಹಿಸಿಕೊಡತಕ್ಕದ್ದು ಮತ್ತು ರಾಜ್ಯ ಸರ್ಕಾರವು ಆ ಲೆಕ್ಕಪರಿಶೋಧನಾ ವರದಿಯನ್ನು ಸ್ವೀಕರಿಸಿದ ನಂತರ ಆದಷ್ಟು ಬೇಗನೆ ರಾಜ್ಯ ವಿಧಾನ ಮಂಡಲದ ಮುಂದೆ ಅದನ್ನು ಇಡುವಂತೆ ಮಾಡತಕ್ಕದ್ದು.

## ಅಧ್ಯಾಯ –VII
## ಸಂಕೀರ್ಣ

**31. ಸದ್ಭಾವನೆಯಿಂದ ಕೈಗೊಂಡ ಕ್ರಮದ ಸಂರಕ್ಷಣೆ.–** ಕೇಂದ್ರ ಸರ್ಕಾರದ, ರಾಜ್ಯ ಸರ್ಕಾರದ, ಆಯೋಗದ, ರಾಜ್ಯ ಆಯೋಗದ ಅಥವಾ ಅದರ ಯಾರೇ ಸದಸ್ಯನ ವಿರುದ್ಧ ಅಥವಾ ಕೇಂದ್ರ ಸರ್ಕಾರದ, ರಾಜ್ಯ ಸರ್ಕಾರದ, ಆಯೋಗದ ಅಥವಾ ರಾಜ್ಯ ಆಯೋಗದ ನಿರ್ದೇಶನದ ಮೇರೆಗೆ ಕಾರ್ಯನಿರ್ವಹಿಸುವ ಯಾರೇ ವ್ಯಕ್ತಿಯ ವಿರುದ್ಧ, ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳನ್ನು ಅನುಸರಿಸಿ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯದ ಸಂಬಂಧದಲ್ಲಿ ಅಥವಾ ಕೇಂದ್ರ ಸರ್ಕಾರದ, ರಾಜ್ಯ ಸರ್ಕಾರದ, ಆಯೋಗದ ಅಥವಾ ರಾಜ್ಯ ಆಯೋಗದ ಪ್ರಾಧಿಕಾರದ ಮೇರೆಗೆ ವರದಿ ಅಥವಾ ಪತ್ರಿಕೆಯ ಪ್ರಕಟಣೆಯ ಸಂಬಂಧದಲ್ಲಿ ಯಾವುದೇ ದಾವೆ, ಪ್ರಾಸಿಕ್ಯೂಷನ್ ಅಥವಾ ಕಾನೂನು ವ್ಯವಹರಣೆಗಳನ್ನು ಹೂಡತಕ್ಕದ್ದಲ್ಲ.

**32. ಅಧ್ಯಕ್ಷನು, ಸದಸ್ಯರು ಮತ್ತು ಇತರ ಅಧಿಕಾರಿಗಳು ಲೋಕ ನೌಕರರಾಗಿರುವುದು.–** ಆಯೋಗದ, ರಾಜ್ಯ ಆಯೋಗದ ಪ್ರತಿಯೊಬ್ಬ ಸದಸ್ಯನನ್ನು ಮತ್ತು ಈ ಅಧಿನಿಯಮದ ಮೇರೆಗೆ

ಪ್ರಕಾರ್ಯಗಳನ್ನು ಚಲಾಯಿಸುವುದಕ್ಕೆ ಆಯೋಗದಲ್ಲಿ ಅಥವಾ ರಾಜ್ಯ ಆಯೋಗದಲ್ಲಿ ನೇಮಕಗೊಂಡ ಪ್ರತಿಯೊಬ್ಬ ಅಧಿಕಾರಿಯನ್ನು ಭಾರತ ದಂಡ ಸಂಹಿತೆ (1860ರ 45)ಯ 21ನೇ ಪ್ರಕರಣದ ಅರ್ಥ ವ್ಯಾಪ್ತಿಯೊಳಗೆ ಲೋಕ ನೌಕರನೆಂದು ಭಾವಿಸತಕ್ಕದ್ದು.

**33. ಕೇಂದ್ರ ಸರ್ಕಾರದ ನಿರ್ದೇಶನಗಳು.–** (1) ಆಯೋಗವು ಈ ಅಧಿನಿಯಮದ ಮೇರೆಗಿನ ತನ್ನ ಪ್ರಕಾರ್ಯಗಳ ನಿರ್ವಹಣೆಯಲ್ಲಿ ರಾಷ್ಟ್ರೀಯ ಉದ್ದೇಶಕ್ಕೆ ಸಂಬಂಧಪಟ್ಟ ಕಾರ್ಯನೀತಿಯ ಪ್ರಶ್ನೆಗಳ ಬಗ್ಗೆ ಕೇಂದ್ರ ಸರ್ಕಾರವು ಅದಕ್ಕೆ ನೀಡಬಹುದಾದಂಥ ನಿರ್ದೇಶನಗಳಿಂದ ಮಾರ್ಗದರ್ಶನ ಪಡೆಯತಕ್ಕದ್ದು.

(2) ಒಂದು ಪ್ರಶ್ನೆಯು ರಾಷ್ಟ್ರೀಯ ಉದ್ದೇಶಕ್ಕೆ ಸಂಬಂಧಪಟ್ಟ ನೀತಿಯ ಪ್ರಶ್ನೆಯೇ ಅಥವಾ ಅಲ್ಲವೇ ಎಂಬ ಬಗ್ಗೆ ಕೇಂದ್ರ ಸರ್ಕಾರದ ಮತ್ತು ಆಯೋಗದ ನಡುವೆ ಯಾವುದೇ ವಿವಾದ ಉದ್ಭವಿಸಿದರೆ, ಆ ಬಗ್ಗೆ ಕೇಂದ್ರ ಸರ್ಕಾರದ ತೀರ್ಮಾನವೇ ಅಂತಿಮವಾಗಿರತಕ್ಕದ್ದು.

**34. ವಿವರಣೆಗಳು ಅಥವಾ ಮಾಹಿತಿ.–** ತನ್ನ ಕಾರ್ಯಚಟುವಟಿಕೆಗಳಿಗೆ ಸಂಬಂಧಿಸಿದಂತೆ ಕಾಲಕಾಲಕ್ಕೆ ಕೇಂದ್ರ ಸರ್ಕಾರವು ಅಗತ್ಯಪಡಿಸಬಹುದಾದಂಥ ವಿವರಪಟ್ಟಿಕೆಗಳನ್ನು ಅಥವಾ ಇತರ ಮಾಹಿತಿಯನ್ನು ಆಯೋಗವು ಕೇಂದ್ರ ಸರ್ಕಾರಕ್ಕೆ ಒದಗಿಸತಕ್ಕದ್ದು.

**35. ನಿಯಮಗಳನ್ನು ರಚಿಸಲು ಕೇಂದ್ರ ಸರ್ಕಾರದ ಅಧಿಕಾರ.–** (1) ಕೇಂದ್ರ ಸರ್ಕಾರವು, ಅಧಿಸೂಚನೆಯ ಮೂಲಕ ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೆ ತರಲು ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ, ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ, ಅಂಥ ನಿಯಮಗಳು ಈ ಮುಂದಿನ ಎಲ್ಲಾ ಅಥವಾ ಯಾವುದೇ ವಿಷಯಗಳ ಬಗ್ಗೆ ಉಪಬಂಧಿಸಬಹುದು, ಎಂದರೆ:–

(ಎ) ಆಯೋಗದ ಅಧ್ಯಕ್ಷನ ಮತ್ತು ಸದಸ್ಯರ ಸೇವಾ ನಿಬಂಧನೆಗಳು ಹಾಗೂ ಷರತ್ತುಗಳು ಮತ್ತು 6ನೇ ಪ್ರಕರಣದ ಮೇರೆಗೆ ಅವರ ಸಂಬಳಗಳು ಮತ್ತು ಭತ್ಯೆಗಳು;

(ಬಿ) 10ನೇ ಪ್ರಕರಣದ (4)ನೇ ಉಪಪ್ರಕರಣದ ಮೇರೆಗೆ ಸಭೆಯ ಕಾರ್ಯಕಲಾಪಗಳ ನಿರ್ವಹಣೆಯಲ್ಲಿ ಆಯೋಗವು ಅನುಸರಿಸಬೇಕಾದ ಪ್ರಕ್ರಿಯೆ;

(ಸಿ) 11ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಆಯೋಗದ ಸದಸ್ಯ ಕಾರ್ಯದರ್ಶಿಯು ಚಲಾಯಿಸಬಹುದಾದ ಅಧಿಕಾರಗಳು ಮತ್ತು ನೆರವೇರಿಸಬೇಕಾದ ಕರ್ತವ್ಯಗಳು;

(ಡಿ) 11ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ಆಯೋಗದ ಅಧಿಕಾರಿಗಳ ಮತ್ತು ಇತರ ನೌಕರರ ಸಂಬಳ ಮತ್ತು ಭತ್ಯೆಗಳು ಮತ್ತು ಇತರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು; ಮತ್ತು

(ಇ) 29ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಆಯೋಗವು ಲೆಕ್ಕಪತ್ರಗಳ ವಿವರ ಪಟ್ಟಿಕೆಯನ್ನು ಮತ್ತು ಇತರ ದಾಖಲೆಗಳನ್ನು ಸಿದ್ಧಪಡಿಸಬೇಕಾದ ನಮೂನೆ.

(3) ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಎರಡು ಅಥವಾ ಹೆಚ್ಚಿನ ಅಧಿವೇಶನಗಳಲ್ಲಿ ಅಡಕವಾಗಬಹುದಾದಂತಹ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಮೇಲೆ ಹೇಳಿದ ಅಧಿವೇಶನದ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಅಧಿವೇಶನಗಳ ನಿಕಟೋತ್ತರದ ಅಧಿವೇಶನದ ಮುಕ್ತಾಯಕ್ಕೆ ಮುಂಚೆ ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ ಆ ನಿಯಮವು ಆ ತರುವಾಯ ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ, ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧೆಯನ್ನುಂಟು ಮಾಡತಕ್ಕದ್ದಲ್ಲ.

**36. ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರದ ಅಧಿಕಾರ.–** (1) ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೆ ತರುವುದಕ್ಕೆ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ, ಅಂಥ ನಿಯಮಗಳು ಈ ಮುಂದಿನ ಎಲ್ಲಾ ಅಥವಾ ಯಾವುವೇ ವಿಷಯಗಳ ಬಗ್ಗೆ ಉಪಬಂಧಿಸಬಹುದು, ಎಂದರೆ:–

(ಎ) ರಾಜ್ಯ ಆಯೋಗದ ಅಧ್ಯಕ್ಷನ ಮತ್ತು ಸದಸ್ಯರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು ಮತ್ತು 20ನೇ ಪ್ರಕರಣದ ಮೇರೆಗಿನ ಅವರ ಸಂಬಳ ಮತ್ತು ಭತ್ಯೆಗಳು;

(ಬಿ) 24ನೇ ಪ್ರಕರಣದೊಂದಿಗೆ ಓದಲಾದ 10ನೇ ಪ್ರಕರಣದ (4)ನೇ ಉಪಪ್ರಕರಣದ ಮೇರೆಗೆ ಸಭೆಯಲ್ಲಿನ ಕಾರ್ಯಕಲಾಪಗಳ ನಿರ್ವಹಣೆಯಲ್ಲಿ ರಾಜ್ಯ ಆಯೋಗವು ಅನುಸರಿಸಬೇಕಾದ ಪ್ರಕ್ರಿಯೆ;

(ಸಿ) 21ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ರಾಜ್ಯ ಆಯೋಗದ ಕಾರ್ಯದರ್ಶಿಯು ಚಲಾಯಿಸಬಹುದಾದ ಅಧಿಕಾರಗಳು ಮತ್ತು ನೆರವೇರಿಸಬೇಕಾದ ಕರ್ತವ್ಯಗಳು;

(ಡಿ) 21ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ರಾಜ್ಯ ಆಯೋಗದ ಅಧಿಕಾರಿಗಳ ಮತ್ತು ಇತರ ನೌಕರರ ಸಂಬಳ ಮತ್ತು ಭತ್ಯೆಗಳು ಮತ್ತು ಇತರ ಸೇವಾ ನಿಬಂಧನೆಗಳು ಹಾಗೂ ಷರತ್ತುಗಳು; ಮತ್ತು

(ಇ) 30ನೇ ಪ್ರಕರಣದ (1)ನೇ ಉಪ ಪ್ರಕರಣದ ಮೇರೆಗೆ ರಾಜ್ಯ ಆಯೋಗವು ಲೆಕ್ಕಪತ್ರಗಳ ವಿವರ ಪಟ್ಟಿಕೆಯನ್ನು ಮತ್ತು ಇತರ ದಾಖಲೆಗಳನ್ನು ಸಿದ್ಧಪಡಿಸಬೇಕಾದ ನಮೂನೆ.

(3) ರಾಜ್ಯ ಸರ್ಕಾರವು ಈ ಪ್ರಕರಣದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ ರಾಜ್ಯ ವಿಧಾನ ಮಂಡಲವು ಎರಡು ಸದನಗಳನ್ನು ಒಳಗೊಂಡಿದ್ದರೆ, ಪ್ರತಿಯೊಂದು ಸದನದ ಮುಂದೆ ಅಥವಾ ಒಂದೇ ಸದನವನ್ನು ಒಳಗೊಂಡಿದ್ದರೆ ಆ ಸದನದ ಮುಂದೆ ಇಡತಕ್ಕದ್ದು.

**37. ತೊಂದರೆಗಳನ್ನು ನಿವಾರಿಸಲು ಅಧಿಕಾರ.–** (1) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೆ ತರುವಲ್ಲಿ ಯಾವುದೇ ತೊಂದರೆ ಉದ್ಭವಿಸಿದರೆ, ಕೇಂದ್ರ ಸರ್ಕಾರವು ರಾಜ ಪತ್ರದಲ್ಲಿ ಪ್ರಕಟಿಸಿದ ಆದೇಶದ ಮೂಲಕ ತೊಂದರೆಯನ್ನು ನಿವಾರಿಸುವುದಕ್ಕೆ ಅವಶ್ಯವೆಂದು ಕಂಡುಬರಬಹುದಾದಂಥ ಮತ್ತು ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗದಂಥ ಉಪಬಂಧಗಳನ್ನು ರಚಿಸಬಹುದು:

ಪರಂತು, ಈ ಅಧಿನಿಯಮದ ಪ್ರಾರಂಭದ ದಿನಾಂಕದಿಂದ ಎರಡು ವರ್ಷಗಳ ಅವಧಿಯ ಮುಕ್ತಾಯದ ತರುವಾಯ ಈ ಪ್ರಕರಣದ ಮೇರೆಗೆ ಯಾವುದೇ ಆದೇಶವನ್ನು ಮಾಡತಕ್ಕದ್ದಲ್ಲ.

(2) ಈ ಪ್ರಕರಣದ ಮೇರೆಗೆ ಮಾಡಿದ ಪ್ರತಿಯೊಂದು ಆದೇಶವನ್ನು, ಅದನ್ನು ಮಾಡಿದ ತರುವಾಯ ಆದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಮಂಡಿಸತಕ್ಕದ್ದು.

* * * *

Govt. Press, Bangalore, P7, W.D:283 , Copies: 150